# ದಿನಾಂಕ : 23.03.2020 ರಂದು ನಡೆದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ 29ನೇ ಸಭೆಯ ನಡವಳಿಗಳು

**: ಅಧ್ಯಕ್ಷತೆ :**

**ಶ್ರೀ ಅರಬೈಲ್‌ಶಿವರಾಮ್ ಹೆಬ್ಬಾರ್**

ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು,
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ,
ಬೆಂಗಳೂರು

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಪ್ರತಿನಿಧಿಗಳು:- (ಸದಸ್ಯರುಗಳು)**

1. ಶ್ರೀ ಎಸ್. ಎಸ್ ಪ್ರಕಾಶಂ, ಅಧ್ಯಕ್ಷರು, ಐಎನ್‌ಟಿಯುಸಿ , ಬೆಂಗಳೂರು
2. ಶ್ರೀ ನಾಗನಾಥ್, ಪ್ರಧಾನ ಕಾರ್ಯದರ್ಶಿ, ಹಿಂದೂ ಮಜ್ದೂರ್ ಸಭಾ,ಬೆಂಗಳೂರು

**ಹಾಜರಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಮಾಲೀಕರ ಪರ ಪ್ರತಿನಿಧಿಗಳು:-(ಸದಸ್ಯರುಗಳು)**

1. ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು (ಪರವಾಗಿ)

**ಹಾಜರಿದ್ದ ಅಧಿಕಾರಿ ಅಥವಾ ಅವರ ನಾಮನಿರ್ದೇಶಿತ ಸದಸ್ಯರು:**

1. ಶ್ರೀ ಕ್ಯಾಪ್ಟನ್ ಮಣಿವಣ್ಣನ್, ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಕಲ್ಯಾಣ ಆಯುಕ್ತರು, ಭಾರತ ಸರ್ಕಾರ, ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ, ಕಾರ್ಮಿಕ ಕಲ್ಯಾಣ ಸಂಸ್ಥೆ, ಬೆಂಗಳೂರು

**ಗೈರು ಹಾಜರಿದ್ದವರು:-**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ, ವಿಕಾಸಸೌಧ, ಬೆಂಗಳೂರು
3. ಅಧ್ಯಕ್ಷರು, ಭಾರತೀಯ ಮಜ್ದೂರ್ ಸಂಘ, ಬೆಂಗಳೂರು
4. ಶ್ರೀಮತಿ ಆರ್.ಸುಭಾಷಿನಿ, ರಾಜ್ಯ ಪ್ರಧಾನ ಕಾರ್ಯದರ್ಶಿ, ಎನ್‌ಎಫ್‌ಐಟಿಯು,ಬೆಂಗಳೂರು
5. ಅಧ್ಯಕ್ಷರು,CREDAI, ಬೆಂಗಳೂರು.
6. ಅಧ್ಯಕ್ಷರು,Construction Federation of India, New Dehli.
7. ಅಧ್ಯಕ್ಷರು, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು

>>>>>>>>>>>>>>

ಮಂಡಳಿಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರು ಹಾಗು ಸದಸ್ಯರುಗಳನ್ನು ಸ್ವಾಗತಿಸುತ್ತಾ, ಈ ದಿನದ ಸಭೆಯನ್ನು ನಡೆಸಿಕೊಡಬೇಕೆಂದು ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರನ್ನು ಕೋರಿದರು. ಕಾರ್ಯಸೂಚಿಯ ಪ್ರಕಾರ ಸಭೆಯನ್ನು ನಡೆಸಲು ಮಾನ್ಯ ಅಧ್ಯಕ್ಷರು ಅನುಮತಿ ನೀಡಿದರು.

ದಿನಾಂಕ 08-05-2019ರಂದು ನಡೆದ ಮಂಡಳಿಯ 28ನೇ ಸಭೆಯ ನಡವಳಿಗಳನ್ನು ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು. ಹಾಗೆಯೇ ಮಂಡಳಿಯ 28ನೇ ಸಭೆಯ ನಿರ್ಣಯಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿಯನ್ನು ಮಂಡಿಸಲಾಯಿತು.

ಮಂಡಳಿಯ 28ನೇ ಸಭೆಯ ನಡವಳಿಗಳನ್ನು ಮಂಡಳಿಯ ಕಾರ್ಯದರ್ಶಿಯವರು ಸಭೆಯಲ್ಲಿ ಓದಿ ತಿಳಿಸುತ್ತಾ, ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು Karnataka Civil Services General Recruitment Rulesರನ್ವಯ ರೂಪಿಸಲು 28ನೇ ಸಭೆಯಲ್ಲಿ ಅನುಮೋದಿಸಿದ್ದು, ಈ ಬಗ್ಗೆ ಸರ್ಕಾರಕ್ಕೆ ದಿನಾಂಕ : 23.09.2019 ರಂದು ಕರಡು ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ. ಆದರೆ, ಈವರೆಗೂ ಸರ್ಕಾರದ ಮಟ್ಟದಲ್ಲಿ ಅನುಷ್ಟಾನವಾಗಿರುವುದಿಲ್ಲ. ಮಂಡಳಿಯ ಕಾನೂನು ಮತ್ತು ಆರ್ಥಿಕ ಸಂಬಂಧಿತ ವಿಷಯಗಳನ್ನು ನಿರ್ವಹಿಸಲು ಓರ್ವ ಲೀಗಲ್ ಕನ್ಸಲ್ಟೆಂಟ್ ಮತ್ತು ಓರ್ವ ಫೈನಾನ್ಸಿಯಲ್ ಕನ್ಸಲ್ಟೆಂಟ್ ರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಕಳೆದ ಸಭೆಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಸದರಿ ಸೇವೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮಂಡಳಿಯ ಕಾರ್ಯಚಟುವಟಿಕೆಗಳ ಬಗ್ಗೆ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಲ್ಲಿ ಅರಿವು ಮೂಡಿಸಲು IEC ಚಟುವಟಿಕೆಗಳನ್ನು ಕೈಗೊಳ್ಳುವ ಕುರಿತು ಕಳೆದ ಸಭೆಯಲ್ಲಿ ಅನುಮೋದನೆ ಪಡೆಯಲಾಗಿತ್ತು. ಈ ಬಗ್ಗೆ ರೂ. 5.00 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಟೆಂಡರ್ ದಾಖಲಾತಿಗಳನ್ನು ಸಿದ್ಧಪಡಿಸಲಾಗಿತ್ತು. ಆದರೆ IEC ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗಿರುವುದಿಲ್ಲ. 2020-21 ನೇ ಸಾಲಿನ ಆಯವ್ಯಯದಲ್ಲಿ ಕಾರ್ಯಗತಗೊಳಿಸಲಾಗುವುದು ಎಂದು ತಿಳಿಸಿದರು.

ಮಂಡಳಿಯಿಂದ ವಿಮಾ ಆಧಾರಿತ ಸೌಲಭ್ಯಗಳನ್ನು ಒದಗಿಸುವ್ಯದರ ಬಗ್ಗೆ ಅಧ್ಯಯನ ಕ್ಷೇತ್ರದಲ್ಲಿ ಹೆಚ್ಚಿನ ಪರಿಣಿತಿ ಹೊಂದಿರುವ ಸಂಸ್ಥೆಯನ್ನು ನಿಯಮಾನುಸಾರ ಆಯ್ಕೆ ಮಾಡಿ ಸಾಧಕ - ಬಾಧಕಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಪಡೆದು ಪರಿಶೀಲಿಸಿ ಜಾರಿಗೊಳಿಸಲು ಕಳೆದ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಆದರೆ ಕಳೆದ ಸಾಲಿನಲ್ಲಿ ಪಿಎಂಎಸ್‌ವೈಎಂ ಯೋಜನೆ ಜಾರಿಯಲ್ಲಿರಲಿಲ್ಲ. ಸದರಿ ಯೋಜನೆಯು ಈ ವರ್ಷ ಜಾರಿಯಲ್ಲಿರುವುದರಿಂದ, ಈ ವರ್ಷ ವಿಮಾ ಆಧಾರಿತ ಸೌಲಭ್ಯಗಳನ್ನು ಒದಗಿಸಲು ಸೂಕ್ತ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಸನ್ಮಾನ್ಯ ಮಂಡಳಿಯ ಅಧ್ಯಕ್ಷರು ಮಾತನಾಡಿ ಕಾರ್ಮಿಕ ಇಲಾಖೆಯು ಕಾರ್ಮಿಕರಿಗೆ ಒಳ್ಳೆಯ ಕೆಲಸಗಳನ್ನು ಮಾಡುವ ಇಲಾಖೆ ಆಗಬೇಕು. ಈ ನಿಟ್ಟಿನಲ್ಲಿ ಸಭೆಯಲ್ಲಿ ಹಾಜರಿರುವ ಅಧಿಕಾರಿಗಳು / ಸದಸ್ಯರುಗಳು ಸೂಕ್ತ ಸಲಹೆಗಳನ್ನು ನೀಡುವುದರ ಮೂಲಕ ಸಹಕಾರ ನೀಡಬೇಕೆಂದು ಕೋರಿದರು.

**ಕಾರ್ಯಸೂಚಿ -01**

**ಮಂಡಳಿಯ 2020-21 ನೇ ಸಾಲಿನ ಆಯವ್ಯಯ ಮಂಡನೆ**

ಮಂಡಳಿಯು 2020-21ನೇ ಸಾಲಿನ ಆಯವ್ಯಯದ ಕರಡನ್ನು ತಯಾರಿಸಿದ್ದು, ಅದರಲ್ಲಿ 2020-21 ನೇ ಸಾಲಿನಲ್ಲಿ ರೂ. 1,808 ಕೋಟಿಗಳಷ್ಟು ಆದಾಯವನ್ನು ಮತ್ತು ರೂ. 2191.63ಕೋಟಿಗಳಷ್ಟು ಖರ್ಚು ವೆಚ್ಚಗಳನ್ನು ನಿರೀಕ್ಷಿಸಲಾಗಿದೆ ಎಚಿದು ತಿಳಿಸುತ್ತಾ, ಈ ವರ್ಷದಲ್ಲಿ 2019-20 ನೇ ಸಾಲಿನ ಕೆಲವು ಯೋಜನೆಗಳನ್ನು ಈ ವರ್ಷದ ಆಯವ್ಯಯದಲ್ಲಿ ಕೈಬಿಟ್ಟಿರುವುದಾಗಿಯೂ ಹಾಗೂ ಕೆಲವು ಹೊಸ ಯೋಜನೆಗಳಾದ 1) Students Essential Kits 2) Laptops for Higher Eudcation3) Full Fee reimbursement for Professional Courses of dependents of Construction Workers 4) Support for exceptional achievers in different fields (both woerkers & dependents)5) Preventive Health Care Training & Check up 6) Pre-paid Health Card 7) Mobile Clinic 8) Nutritional Kits ಹೀಗೆ ಇನ್ನು ಅನೇಕಹೊಸ ಯೋಜನೆಗಳನ್ನು ರೂಪಿಸಿರುವುದಾಗಿಯೂ ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಆಯವ್ಯಯದ ಅವಶ್ಯಕತೆ ಇರುವ್ಯದಾಗಿ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು. ಆಗ ಮಂಡಳಿಯ ಅಧ್ಯಕ್ಷರು ಮಾತನಾಡಿ ಯಾವ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಾಗುತ್ತದೆಯೋ ಅಂತಹವುಗಳನ್ನ ಸೇರ್ಪಡಿಸಿಕೊಂಡು ಜಾರಿ ಮಾಡುವಂತೆ ತಿಳಿಸಿದರು. ಆಗ ಇದಕ್ಕೆ ಸರ್ವ ಸದಸ್ಯರುಗಳು ಸಹಮತ ವ್ಯಕ್ತಪಡಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ2020-21 ನೇ ಸಾಲಿನಲ್ಲಿ ರೂ.1,808 ಕೋಟಿಗಳಷ್ಟು ಆದಾಯವನ್ನು ಮತ್ತು ರೂ. 2191.63 ಕೋಟಿಗಳಷ್ಟು ಖರ್ಚು ವೆಚ್ಚಗಳನ್ನು ನಿರೀಕ್ಷಿಸಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ -02**

**ಕಟ್ಟಡ ಕಾರ್ಮಿಕರಿಗೆ ಕೆನರಾ ಬ್ಯಾಂಕ್ ವತಿಯಿಂದ ಹೆಲ್ತ್‌ಡೆಬಿಟ್ ಕಾರ್ಡ್‌ಗಳನ್ನು ವಿತರಿಸುವ ಯೋಜನೆಯ ಕುರಿತು.**

ರಾಜ್ಯದಲ್ಲಿ ಸಂಘಟತ, ಅಸಂಘಟಿತ ಕಾರ್ಮಿಕರಿಗೆ ಮತ್ತು ಕಟ್ಟಡ ಕಾರ್ಮಿಕರು ಹಾಗೂ ಅವರ ಕುಟುಂಬದವರಿಗೆ 'ವೈದ್ಯಕೀಯ ಡೆಬಿಟ್ ಕಾರ್ಡ್' ಅಡಿಯಲ್ಲಿ ವೈದ್ಯಕೀಯ ವೆಚ್ಚ ಮರುಪಾವತಿ ಯೋಜನೆ ಅನುಷ್ಠಾನ ಮಾಡಲು ಕೆನರಾ ಬ್ಯಾಂಕಿಗೆ ತಾತ್ವಿಕ ಅನುಮೋದನೆ ನೀಡಿ ಸರ್ಕಾರವು ದಿನಾಂಕ : 15.02.2020 ರಲ್ಲಿ ಆದೇಶ ಹೊರಡಿಸಿರುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ರೂ. 3.80 ಕೋಟಿ ಮೊತ್ತದಲ್ಲಿ ಕೆನರಾ ಬ್ಯಾಂಕ್ ಸೇವೆಗಳನ್ನು ನೀಡಲು ಸರ್ಕಾರದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ- 1999 ರ ಕಲಂ 4ಜಿ ರಡಿ ವಿನಾಯಿತಿಯನ್ನು ನೀಡಿರುತ್ತದೆ.

ಈ ಪ್ರಸ್ತಾವನೆಯಲ್ಲಿ ಎಲ್ಲಾ ಕಾರ್ಮಿಕರಿಗೂ ಅಚಿದರೆ ಸಂಘಟಿತ, ಅಸಂಘಟಿತ ಕಾರ್ಮಿಕರು ಒಳಗೊಂಡಂತೆ ಹೆಲ್ತ್ ಕಾರ್ಡ್ ಯೋಜನೆಯನ್ನು ವಿಸ್ತರಿಸುವಬಗ್ಗೆ ಪ್ರಸ್ತಾಪವಿದ್ದು, ಇದಕ್ಕೆ ಸಂಬಂಧಪಟ್ಟಂತೆ ಅಭಿವೃದ್ಧಿಪಡಿಸಬೇಕಾದ ತಂತ್ರಾಂಶ, ಯೋಜನೆಯ

ಖರ್ಚು ವೆಚ್ಚಗಳು, ಕಾರ್ಡ್‌ಗಳ ಮುದ್ರಣ, ವಿತರಣೆ ಮತ್ತು ನಿರ್ವಹಣೆ ವಿಷಯಗಳ ಬಗ್ಗೆ ಮಂಡಳಿಯ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಕಟ್ಟಡ ಕಾರ್ಮಿಕರಿಗೆ ಕೆನರಾ ಬ್ಯಾಂಕ್ ವತಿಯಿಂದ ಹೆಲ್ತ್ ಡೆಬಿಟ್ ಕಾರ್ಡ್‌ಗಳನ್ನು ವಿತರಿಸುವ ಯೋಜನೆಗೆ ಮಂಡಳಿಯ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ -03**

**ಮಂಡಳಿಯಲ್ಲಿ ಪಿಎಂಯು ಗಳನ್ನು ಸ್ಥಾಪಿಸುವ ಕುರಿತು**

ಮಂಡಳಿಯ ಕಾರ್ಯಚಟುವಟಿಕೆಗಳು ಪ್ರಸ್ತುತ ಅಗಾಧವಾಗಿ ಬೆಳೆದಿದ್ದು, ಪ್ರತಿಯೊಂದು ವಿಭಾಗದಲ್ಲೂ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಆಯಾ ಕ್ಷೇತ್ರದಲ್ಲಿ ಪರಿಣಿತಿ ಪಡೆದಿರುವ ತಜ್ಞರ ಸೇವೆ ಮಂಡಳಿಗೆ ಅಗತ್ಯವಿರುವುದಾಗಿಮಂಡಳಿಯ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಚರ್ಚಿಸಿದ ನಂತರ ಅವಶ್ಯಕತೆ ಇರುವ ಕ್ಷೇತ್ರದಲ್ಲಿ ಪರಿಣಿತಿ ಪಡೆದಿರುವ ತಜ್ಞರ ಸೇವೆಯನ್ನು ಟೆಂಡರ್ ಮೂಲಕ ಪಡೆಯಲು ಮತ್ತು ಅವರಿಗೆ ವೇತನ ಹಾಗೂ ಇತರೆ ಭತ್ಯೆಗಳನ್ನು ನೀಡಲು ಮಂಡಳಿಯ ಕಾರ್ಯದರ್ಶಿಗಳಿಗೆ ಅಧಿಕಾರವನ್ನು ನೀಡಿ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ -04**

**ಕಟ್ಟಡ ಕಾರ್ಮಿಕರಿಗೆಶ್ರಮ ಸಮ್ಮಾನ ಮಾಡುವ ಕಾರ್ಯಕ್ರಮದಲ್ಲಿ ಬಹುಮಾನವಾಗಿ ಮೊತ್ತದ ಬದಲು ಪದಕ ವಿತರಣೆ ಮಾಡುವ ಕುರಿತು**

ಮಂಡಳಿಯ ಫಲಾನುಭವಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಕಾಇ 467ಎಲ್‌ಇಟಿ 2017 ದಿನಾಂಕ : 24.09.2018ರಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ಪ್ರತಿ ಜಿಲ್ಲೆಗೆ ಒಂದರಂತೆ ಶ್ರಮ ಸನ್ಮಾನ ಪ್ರಶಸ್ತಿ ಹಾಗೂ 10 ವಿಶೇಷ ಪುರಸ್ಕಾರ ಪ್ರಶಸ್ತಿಗಳನ್ನು ನೀಡಲು ಆದೇಶಿಸಿರುತ್ತದೆ. ಇದರಲ್ಲಿ ತಲಾ ರೂ. 1,000/- ಗಳ ಬಹುಮಾನ ಮೊತ್ತವಿರುತ್ತದೆ. ಅದರನ್ವಯ 2019 ರಲ್ಲಿ ಮಾರ್ಚ್ 01 ರಂದು ಜಿಲ್ಲಾ ಮಟ್ಟದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿ ಪ್ರಶಸ್ತಿಗಳನ್ನು ವಿತರಿಸಲಾಗಿರುತ್ತದೆ.

ಆದರೆ, ಸರ್ಕಾರದ ಆದೇಶ ಸಂಖ್ಯೆ ಕಾಇ 149, ಎಲ್‌ಇಟಿ 2018 ಭಾಗ-1, ದಿನಾಂಕ : 24.02.2020 ರಲ್ಲಿ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿಯಿಂದಪ್ರತಿ ಜಿಲ್ಲೆಯಲ್ಲಿ ಪ್ರಥಮ ಬಹುಮಾನವಾಗಿ ಚಿನ್ನದ ಪದಕ, ದ್ವಿತೀಯ ಮತ್ತು ತೃತೀಯ ಬಹುಮಾನವಾಗಿ ಬೆಳ್ಳಿಯ ಪದಕ ಮತ್ತು ವಿಶೇಷ ಪುರಸ್ಕಾರವಾಗಿ ಪ್ರತಿ ಜಿಲ್ಲೆಯಲ್ಲಿ 08 ಜನರಿಗೆ 1,000/- ಗಳ ನಗದು ಬಹುಮಾನ ನೀಡಲು ಸರ್ಕಾರವು ಆದೇಶಿಸಿರುತ್ತದೆ. ಸದರಿ ಸರ್ಕಾರದ ಆದೇಶ ಕರ್ನಾಟಕ ಅಸಂಘಟಿತ

ಕಾರ್ಮಿಕ ಸಾಮಾಜಿಕ ಭದ್ರತಾ ಮಂಡಳಿಗೆ ಮಾತ್ರ ಸಂಬಂಧಿಸಿರುವುದರಿಂದ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದಲೂ ಸಹ ಪ್ರಶಸ್ತಿಯ ಬದಲಾಗಿ ಪದಕಗಳನ್ನು ವಿತರಿಸಬಹುದಾಗಿದೆ. ಇದಕ್ಕಾಗಿ ಪ್ರತಿ ಜಿಲ್ಲೆಗೆ ತಲಾ ಒಂದೊಂದು ಪ್ರಥಮ, ದ್ವಿತೀಯ, ತೃತೀಯ ಪ್ರಶಸ್ತಿ ಮತ್ತು 08 ವಿಶೇಷ ಪುರಸ್ಕಾರ ಪ್ರಶಸ್ತಿ ರಂತೆ ಒಟ್ಟು 30 ಜಿಲ್ಲೆಗಳಿಗೆಒಟ್ಟು ರೂ. 12,30,000/- ಗಳು ಖರ್ಚಾಗಬಹುದೆಂದು ಅಂದಾಜಿಸಲಾಗಿದೆಯೆಂದು ಮಂಡಳಿಯ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ ಪ್ರಥಮ, ದ್ವಿತೀಯ, ತೃತೀಯ ಪ್ರಶಸ್ತಿಯನ್ನು ನೀಡುವುದರ ಜೊತೆಗೆ ತಲಾ 1,000/- ಗಳ ನಗದು ಬಹುಮಾನವನ್ನು ಪ್ರತಿ ಜಿಲ್ಲೆಯಲ್ಲಿ 08 ಜನರಿಗೆ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ -05**

**2020 ನೇ ಸಾಲಿನ ಗೋಡೆ ಕ್ಯಾಲೆಂಡರ್ ಮತ್ತು ಪಾಕೆಟ್ ಕ್ಯಾಲೆಂಡರ್‌ಗಳನ್ನು ಮುದ್ರಿಸಿ ಸರಬರಾಜು ಮಾಡುವ ಕುರಿತು.**

ಮಂಡಳಿಯ ವತಿಯಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಿಗೆ ವಾಲ್ ಕ್ಯಾಲೆಂಡರ್ ಮತ್ತು ಪ್ಯಾಕೆಟ್ ಕ್ಯಾಲೆಂಡರ್ ಮುದ್ರಿಸಿ ಸರಬರಾಜು ಮಾಡುವ ಕುರಿತಂತೆ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರು ದಿನಾಂಕ : 26.02.2020 ರಂದು ಮಂಡಳಿಗೆ ನಿರ್ದೇಶಿಸಿರುತ್ತಾರೆ. ಆದರೆ ಪ್ರಸಕ್ತ ಸಾಲಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಯಾವುದೇ ಆದೇಶ ಸ್ವೀಕೃತವಾಗಿರುವುದಿಲ್ಲ. ಆದರೆ, ಮೆ॥ಎಂ.ಸಿ.ಎ. ಸಂಸ್ಥೆಯಿಂದ ಪ್ರತಿ ಗೋಡೆ ಕ್ಯಾಲೆಂಡರ್ ಗೆ ರೂ. 40/- ರಂತೆ ಮತ್ತು ಪ್ರತಿ ಪ್ಯಾಕೆಟ್ ಕ್ಯಾಲೆಂಡರ್ ಗೆ ರೂ. 11/- ರಂತೆ (ಜಿಎಸ್‌ಟಿ 12% ಪ್ರತ್ಯೇಕ) ದರ ನಮೂದಿಸಿ ಪ್ರಸ್ತಾವನೆಯನ್ನು ದಿನಾಂಕ : 21.03.2020 ರಂದು ಮಂಡಳಿಗೆ ಸಲ್ಲಿಸಿರುತ್ತಾರೆ. ಹಾಗಾಗಿ 2020 ನೇ ಸಾಲಿನಲ್ಲಿ ಗೋಡೆ ಕ್ಯಾಲೆಂಡರ್ ಮತ್ತು ಪ್ಯಾಕೆಟ್ ಕ್ಯಾಲೆಂಡರ್ ಮುದ್ರಿಸಿ ಮಂಡಳಿಯ ಫಲಾನುಭವಿಗಳಿಗೆ ವಿತರಿಸುವ ಬಗ್ಗೆ ಮಂಡಳಿಯ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ 2020 ನೇ ಸಾಲಿನಲ್ಲಿ ಗೋಡೆ ಕ್ಯಾಲೆಂಡರ್ ಮತ್ತು ಪ್ಯಾಕೆಟ್ ಕ್ಯಾಲೆಂಡರ್‌ಗಳನ್ನು ಮೆ॥ ಎಂ.ಸಿ.ಎ. ಸಂಸ್ಥೆಯಿಂದ ಮುದ್ರಿಸಿ ಮಂಡಳಿಯ ಫಲಾನುಭವಿಗಳಿಗೆ ವಿತರಿಸುವ ಬಗ್ಗೆ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ –06**

**ಮಂಡಳಿಯ ಕಾರ್ಯಚಟುವಟಿಕೆಗಳ ಬಗ್ಗೆ ಐಇಸಿ ಟೆಂಡರ್ ಕರೆಯುವ ಕುರಿತು.**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿಕೊಂಡಿರುವ ಕಾರ್ಮಿಕರ ನೋಂದಣಿ ಮಾಡುವುದು ಹಾಗೂ ನೋಂದಾಯಿತ ಫಲಾನುಭವಿಗಳಿಗೆ ಮಂಡಳಿಯ ವತಿಯಿಂದ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ವಿತರಿಸಲಾಗಿರುತ್ತದೆ. ಆದರೆ ನೋಂದಾಯಿತರಾದ ಎಲ್ಲಾ ಫಲಾನುಭವಿಗಳು ಶಿಕ್ಷಣ ಮತ್ತು ತಿಳುವಳಿಕೆಯ ಅಭಾವದಿಂದ ಸೌಲಭ್ಯಗಳನ್ನು ಪಡೆಯಲು ವಿಫಲರಾಗುತ್ತಿದ್ದಾರೆ. ಈ ಕೊರತೆಯನ್ನು ನಿವಾರಿಸಲು ಮಾಹಿತಿ, ಶಿಕ್ಷಣ ಮತ್ತು ಸಂವಹನದ ಅವಶ್ಯಕತೆ ಇರುತ್ತದೆ. ದಿನಾಂಕ : 04.07.2018 ರ ಕೇಂದ್ರ ಸರ್ಕಾರದ ನಿರ್ದೇಶನದಲ್ಲಿ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಬೇಕೆಂದು ಹಾಗೂ ಇದರ ವೆಚ್ಚ, ಆರ್ಥಿಕ ವರ್ಷದಲ್ಲಿನ ಒಟ್ಟು ವೆಚ್ಚದ ಶೇಕಡ 5 ರ ಒಳಗಿರಬೇಕೆಂದು ಸೂಚಿಸಿರುತ್ತದೆ ಎಂದು ಸಭೆಗೆ ತಿಳಿಸಿದರು.

ಈ ಹಿನ್ನಲೆಯಲ್ಲಿ ಮಂಡಳಿಯ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲು, ಪ್ರಚಾರಗೊಳಿಸಲು ವಿವಿಧ ಮಾಧ್ಯಮಗಳಾದ ಟಿ.ವಿ., ರೇಡಿಯೋ, ಪ್ರಕಟಣೆಗಳು, ಕಾರ್ಯಾಗಾರಗಳು ಇತ್ಯಾದಿ ಒಳಗೊಂಡ ವಿವರವಾದ ರೂ. 5 ಕೋಟಿಗಳ IEC Budget ತಯಾರಿಸಿ QCBS ಆಧಾರದ ಮೇಲೆ ಟೆಂಡರ್ ಕರೆದು 15 ತಿಂಗಳ ಅವಧಿಗೆ Consultancy Firmಆಯ್ಕೆ ಮಾಡಲು ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿದೆ ಎಂದು ಮಂಡಳಿಯ ಕಾರ್ಯದರ್ಶಿರವರು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಚಿತರ IEC ಚಟುವಟಿಕೆಗಳನ್ನು ರೂ 5.00 ಕೋಟಿ ವೆಚ್ಚದಲ್ಲಿ ಕೈಗೊಳ್ಳಲು ಟೆಂಡರ್ ಕರೆಯುವ ಕುರಿತು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ –07**

**ಕಾರ್ಮಿಕರ ನೋಂದಣಿ ಮತ್ತು ನವೀಕರಣ ಬಗ್ಗೆ ಮೊಬೈಲ್ ಆಪ್ ಫ್ಲಾಟ್ ಫಾರಂ ವಿತ್ ವೆಬ್ ಅಪ್ಲಿಕೇಷನ್ ರೂಪಿಸುವ ಕುರಿತು.**

ಮಂಡಳಿಯಲ್ಲಿ ಪ್ರಸ್ತುತ ಕಾರ್ಮಿಕರ ನೋಂದಣಿ ಮತ್ತು ನವೀಕರಣ ಹಾಗೂ ಸೌಲಭ್ಯಗಳ ವಿತರಣಾ ಆನ್‌ಲೈನ್ ಕಾರ್ಯಗಳನ್ನು ಸೇವಾಸಿಂಧು ತಂತ್ರಾಂಶ ಮತ್ತು ಕಾರ್ಮಿಕ ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ. ಆದರೆ ಪ್ರಸ್ತುತ ಸೇವಾಸಿಂಧು ತಂತ್ರಾಂಶದಲ್ಲಿ ಸರ್ವರ್ ತೊಂದರೆಗಳು ಆಗಾಗ್ಗೆ ಕಂಡು ಬರುತ್ತಿದ್ದು, ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳಿಂದ ದೂರುಗಳು ಮಂಡಳಿಯಲ್ಲಿ ಸ್ವೀಕೃತಗೊಳ್ಳುತ್ತಿರುತ್ತವೆ ಎಂದು ಸಭೆಗೆ ತಿಳಿಸಿದರು.

ಈ ಹಿನ್ನಲೆಯಲ್ಲಿ ಕಾರ್ಮಿಕರ ನೋಂದಣಿ, ನವೀಕರಣ ಮತ್ತು ಸೌಲಭ್ಯಗಳ ವಿತರಣಾ ಕಾರ್ಯವನ್ನು ಸರಳೀಕರಣಗೊಳಿಸಿ ಯಾವುದೇ ಕಛೇರಿಗಳಿಗೆ ಹೋಗುವ ಅವಶ್ಯಕತೆ ಇರದೇ ಮೊಬೈಲ್ ಮೂಲಕ ಅರ್ಜಿ ಸಲ್ಲಿಸಬಹುದಾದ ತಂತ್ರಾಂಶವನ್ನು

ಸಿದ್ಧಪಡಿಸಲು ಯೋಚಿಸಲಾಗಿದೆ. ಹಾಗಾಗೀ ಮೊಬೈಲ್ ಆಪ್ ಫ್ಲಾಟ್ ಫಾರಂ ವಿತ್ ವೆಬ್ ಅಪ್ಲಿಕೇಷನ್ ರೂಪಿಸಲು ಟೆಂಡರ್ ಕರೆದು ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಬೇಕಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಗೆ ಪಾವತಿಯಾಗುವ ಕಲ್ಯಾಣ ಸುಂಕ ಹಾಗೂ ಫಲಾನುಭವಿಗಳಿಗೆ ವಿತರಿಸಲಾಗುವ ಸೌಲಭ್ಯಗಳಿಗಾಗಿ ವ್ಯಯವಾಗುವ ಹಣಕಾಸಿನ ವಹಿವಾಟುಗಳನ್ನು ಕೆಟಿಪಿಪಿ ಕಾಯ್ದೆ ಅನುಸಾರ ಮುಕ್ತ ಪಾರದರ್ಶಕ ನಿರ್ವಹಣೆಗಾಗಿ ಟೆಂಡರ್ ಕರೆದು ಅರ್ಹ ಸಂಸ್ಥೆಯನ್ನು ಆಯ್ಕೆ ಮಾಡಿಕಾರ್ಮಿಕರ ನೋಂದಣಿ ಮತ್ತು ನವೀಕರಣ ಬಗ್ಗೆ ಮೊಬೈಲ್ ಆಪ್ ಫ್ಲಾಟ್ ಫಾರಂ ವಿತ್ ವೆಬ್ ಅಪ್ಲಿಕೇಷನ್ ರೂಪಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ –08**

**ಮಂಡಳಿಯ ಫಲಾನುಭವಿಗಳನ್ನು ಕೇಂದ್ರ ಸರ್ಕಾರದ ಪಿ.ಎಂ.ಎಸ್.ವೈ.ಎಂ ಯೋಜನೆಗೆ ಒಳಪಡಿಸುವ ಕುರಿತು.**

ಪ್ರಧಾನಮಂತ್ರಿ ಶ್ರಮಯೋಗಿ ಮಾನ್‌ಧನ್ ಯೋಜನೆಯು (ಪಿ.ಎಂ.ಎಸ್.ವೈ.ಎಂ) 2019 ರಲ್ಲಿ ಕೇಂದ್ರ ಸರ್ಕಾರವು ಜಾರಿಗೆ ತಂದಿದ್ದು, ಕಟ್ಟಡ ಕಾರ್ಮಿಕರು ಸೇರಿದಂತೆ 126 ವಲಯದ ಅಸಂಘಟಿತ ಕಾರ್ಮಿಕರು ಈ ಯೋಜನೆ ವ್ಯಾಪ್ತಿಗೆ ಒಳಪಡುತ್ತಾರೆ. ಈ ಯೋಜನೆ ವ್ಯಾಪ್ತಿಗೆ ಒಳಪಡುವವರು 18 ವರ್ಷದಿಂದ 40 ವರ್ಷದ ವಯೋಮಿತಿ ಒಳಗಿರಬೇಕು. ಅವರ ಗರಿಷ್ಟ ಮಾಸಿಕ ವೇತನ ರೂ. 15,000/– ಒಳಗಿರಬೇಕು. ಇಎಸ್‌ಐ, ಪಿಎಫ್ ಮತ್ತು ಎನ್‌ಪಿಎಸ್ ಯೋಜನೆಯ ವ್ಯಾಪ್ತಿಗೆ ಒಳಪಟ್ಟವರು ಮತ್ತು ಆದಾಯ ತೆರಿಗೆ ಪಾವತಿಸುವವರು ಇದರ ಸದಸ್ಯತ್ವ ಪಡೆಯಲು ಅರ್ಹರಿರುವುದಿಲ್ಲ. ಈ ಯೋಜನೆಯ ವ್ಯಾಪ್ತಿಗೆ ಒಳಪಡುವವರು 18 ವರ್ಷದಿಂದ 40 ವರ್ಷದ ವಯೋಮಾನದವರು ನೋಂದಣಿ ಮಾಡಿಸಿದ ನಂತರ ಮಾಸಿಕವಾಗಿ ಆ ವಯೋಮಾನಕ್ಕೆ ನಿಗದಿಪಡಿಸಿದ ಮಾಸಿಕ ವಂತಿಕೆಯನ್ನು ತಮ್ಮ ವಯಸ್ಸು 60 ವರ್ಷ ಆಗುವವರೆಗೂ ಪಾವತಿಸಬೇಕು. ಇದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರವು ಅದೇ ಪ್ರಮಾಣದ ವಂತಿಕೆಯನ್ನು (Matching Contribution) ಫಲಾನುಭವಿಯ ಖಾತೆಗೆ ಜಮಾ ಮಾಡುತ್ತದೆ. ಫಲಾನುಭವಿಗೆ 60 ವರ್ಷ ತಲುಪಿದ ನಂತರ ಅವರಿಗೆ ಮಾಸಿಕ ರೂ. 3,000/– ಗಳ ಪಿಂಚಣಿ ದೊರೆಯುತ್ತದೆ.

ಮಂಡಳಿಯಲ್ಲಿ ಪ್ರಸ್ತುತ 22 ಲಕ್ಷ ಕಾರ್ಮಿಕರು ನೋಂದಣಿಯಾಗಿದ್ದು, ಇದರಲ್ಲಿ 8 ಲಕ್ಷ ಕಾರ್ಮಿಕರು ಮಾತ್ರ ತಮ್ಮ ಸದಸ್ಯತ್ವವನ್ನು ನವೀಕರಿಸಿಕೊಂಡಿರುತ್ತಾರೆ. ಅವರಲ್ಲಿ 18 ರಿಂದ 40 ವರ್ಷದೊಳಗಿನ ಕಾರ್ಮಿಕರು 4,73,934 ಸಂಖ್ಯೆಯಾಗಿದ್ದು, 18 ವರ್ಷ ವಯೋಮಾನದ ಕಾರ್ಮಿಕರಿಗೆ ಮಾಸಿಕ ರೂ. 55/– ಗಳನ್ನು ಪಾವತಿಸಬೇಕಾಗಿದ್ದು, ಹಾಗೆಯೇ 40 ವರ್ಷ ವಯೋಮಾನದ ಕಾರ್ಮಿಕರಿಗೆ ಮಾಸಿಕ ರೂ. 200/– ಗಳನ್ನು ಪಾವತಿಸಬೇಕಾಗಿರುತ್ತದೆ. ಈ ಮೊತ್ತವನ್ನು ಸರಾಸರಿಯಾಗಿ ರೂ. 100/– ಗಳೆಂದು ಪರಿಗಣಿಸಿ ಲೆಕ್ಕ ಹಾಕಿದ್ದಲ್ಲಿ ಮಾಸಿಕವಾಗಿ ಅಂದಾಜು ರೂ. 4.73 ಕೋಟಿ ಮೊತ್ತವನ್ನು ಮಂಡಳಿಯಿಂದ ಮರುಪಾವತಿ ಮಾಡಬೇಕಾಗುತ್ತದೆ ಹಾಗೂ ವಾರ್ಷಿಕ ರೂ. 53.87

ಕೋಟಿ ಮೊತ್ತವನ್ನು ಈ ಯೋಜನೆಗಾಗಿ ಮೀಸಲಿಡಬೇಕಾಗುತ್ತದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ರೂ. 53.87 ಕೋಟಿಗಳನ್ನು ಮಂಡಳಿಯ ವತಿಯಿಂದ ಭರಿಸಲು ಸರ್ಕಾರದ ಆದೇಶ ಸಂಖ್ಯೆ : ಕಾಇ 59 ಎಲ್‌ಇಟಿ 2019 (ಭಾಗ–2) ದಿನಾಂಕ : 18.12.2019 ರಲ್ಲಿ ಸರ್ಕಾರವು ಆದೇಶಿಸಿರುವುದಾಗಿ ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯಲ್ಲಿ ಸದಸ್ಯತ್ವವನ್ನು ನವೀಕರಿಸಿಕೊಳ್ಳುವಂತಹ ಮಂಡಳಿಯ ಫಲಾನುಭವಿಗಳನ್ನು ಕೇಂದ್ರ ಸರ್ಕಾರದ ಪಿ.ಎಂ.ಎಸ್.ವೈ.ಎಂ ಯೋಜನೆಗೆ ಒಳಪಡಿಸಲು ಹಾಗೂ ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ ರೂ.53.87 ಕೋಟಿಗಳನ್ನು ಮಂಡಳಿಯ ವತಿಯಿಂದ ಭರಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ –09**

**ಆರೋಗ್ಯ ಇಲಾಖೆ ಅನುಷ್ಠಾನಗೊಳಿಸುತ್ತಿರುವ ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯನ್ನು ಮಂಡಳಿಯ ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ವಿಸ್ತರಿಸುವ ಕುರಿತು**

ಆರೋಗ್ಯ ರಕ್ಷಣಾ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರದ ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಉಪಯೋಗವನ್ನು ಮಂಡಳಿಯ ಫಲಾನುಭವಿಗಳಿಗೆ ತಲುಪಿಸಲು ಸಹಕಾರ ನೀಡುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಇವರು ಪತ್ರದ ಮುಖೇನ ಕೋರಿರುತ್ತಾರೆ.

ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯಡಿ ವರ್ಷಕ್ಕೆ ಪ್ರತಿ ಕುಟುಂಬದ ಒಬ್ಬ ಅಥವಾ ಹೆಚ್ಚು ವ್ಯಕ್ತಿಗಳು ಸಂಪೂರ್ಣವಾಗಿ ರೂ. 5 ಲಕ್ಷದ ಮಿತಿಯ ವೈದ್ಯಕೀಯ ಸೇವೆಯನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಸೇವಾ ಪ್ರಯೋಜನದ ಮಿತಿ ಸರ್ಕಾರಿ ಪ್ಯಾಕೇಜ್ ದರದ ಶೇ 30ರಷ್ಟು ಇದ್ದು, ಸಹ – ಪಾವತಿಯ ಆಧಾರದ ಮೇಲೆ ಒಟ್ಟಾರೆ ವಾರ್ಷಿಕ ನಿಧಿ ಪ್ರತಿ ಕುಟುಂಬಕ್ಕೆ ರೂ.1.50 ಲಕ್ಷ ಇರುತ್ತದೆ.

ನಿಗದಿತ ಪ್ರಾಥಮಿಕ, ಸಾಮಾನ್ಯ ದ್ವಿತೀಯ ಮತ್ತು ದ್ವಿತೀಯ ಆರೈಕೆ ಸೇವೆಗಳನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಒದಗಿಸಲಿದ್ದು, ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ ಸಾಮರ್ಥ್ಯ ಇಲ್ಲದಿದ್ದಲ್ಲಿ ರೆಫರಲ್ ಮೂಲಕ ಉನ್ನತ ಸರ್ಕಾರಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು. ಅಲ್ಲಿಯೂಸಾಮರ್ಥ್ಯ ಇಲ್ಲದಿದ್ದಲ್ಲಿ ನೋಂದಾಯಿತ ಖಾಸಗಿ ಆಸ್ಪತ್ರೆಯಾಗಲೀ ಅಥವಾ ಸರ್ಕಾರಿ ಆಸ್ಪತ್ರೆಯಾಗಲೀ ಯಾವುದೇ ರೆಫರೆಲ್ ಇಲ್ಲದೇ ಚಿಕಿತ್ಸೆಯನ್ನು ಪಡೆಯಬಹುದಾಗಿದೆ.

ಈ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲು ವಿಶಿಷ್ಟ ಗುರುತಿನ ಚೀಟಿಗಳನ್ನು ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್ ಆಧರಿಸಿ ರಾಜ್ಯದ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ, ತಾಲ್ಲೂಕು ಆಸ್ಪತ್ರೆಗಳಲ್ಲಿ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಹಾಗೂ ಕರ್ನಾಟಕ ಒನ್ ಹಾಗೂ ಬೆಂಗಳೂರು ಒನ್ ಕೇಂದ್ರಗಳಲ್ಲಿ ಹಾಗೂ ಸೇವಾ ಸಿಂಧು ಕೇಂದ್ರಗಳಲ್ಲಿ

ರೂ. 10 ಪಾವತಿಸಿ ಎ4 ಅಳತೆಯ ಹಾಳೆಯ ಮೇಲೆ ಹಾಗೂ ರೂ. 35 ಪಾವತಿಸಿ ಪಿವಿಸಿ ಕಾರ್ಡ್ ನೀಡಲಾಗುತ್ತಿರುತ್ತದೆ.

ಮೇಲಿನ ಈ ಯೋಜನೆಯಲ್ಲಿ ಸಾಕಷ್ಟು ವೈದ್ಯಕೀಯ ಅನುಕೂಲಗಳು ಇರುವ ಹಿನ್ನಲೆಯಲ್ಲಿ ಮಂಡಳಿಯ ನೋಂದಾಯಿತ ಕಾರ್ಮಿಕರನ್ನು ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯಡಿ ನೋಂದಾಯಿಸಲು ಮಂಡಳಿ ವತಿಯಿಂದಲೇ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಈಗಾಗಲೇ ಮೈಸೂರು ಜಿಲ್ಲೆಯನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಿಕೊಂಡು ಈ ಯೋಜನೆಯನ್ನು ವಿಸ್ತರಿಸಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಆರೋಗ್ಯ ಇಲಾಖೆ ಅನುಷ್ಠಾನಗೊಳಿಸುತ್ತಿರುವ ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯನ್ನು ಮಂಡಳಿಯ ನೋಂದಾಯಿತ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ವಿಸ್ತರಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ಕಾರ್ಯಸೂಚಿ –10

**ಕಾರ್ಮಿಕ ಇಲಾಖೆಯ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಕಛೇರಿಗಳಲ್ಲಿ ಮಂಡಳಿಯವತಿಯಿಂದ ಎರಡು ಡಿ.ಇ.ಒ ಗಳ ಸೇವೆಯನ್ನು ಪಡೆಯಲು ಸರ್ಕಾರದಿಂದ ಬಂದಿರುವ ಸೂಚನೆಯ ಕುರಿತು.**

ಸರ್ಕಾರದ ಪತ್ರ ಸಂಖ್ಯೆ : ಕಾಇ 06 ಎಲ್ಇಟಿ 2020 ದಿನಾಂಕ : 12.02.2020 ರನ್ವಯ ಪ್ರತಿ ಜಿಲ್ಲೆಗಳಲ್ಲಿ ಕಾರ್ಮಿಕ ಇಲಾಖೆಯ ಕಛೇರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸ ಬೇಕಾಗಿರುವುದರಿಂದ ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳು / ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರುಗಳ ಕಛೇರಿಗೆ ಇಬ್ಬರು ಡಾಟಾಎಂಟ್ರಿ ಆಪರೇಟರ್‌ಗಳನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಮೂಲಕ ನೇಮಿಸಿಕೊಳ್ಳಲು ಕೂಡಲೇ ಸೂಕ್ತ ಕ್ರಮ ವಹಿಸುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ನಿರ್ದೇಶಿಸಿರುತ್ತಾರೆ.

ಮಂಡಳಿಯ ವತಿಯಿಂದ ಈಗಾಗಲೇ ಕ್ಷೇತ್ರ ಕಛೇರಿಗಳಿಗೆ ತಲಾ 01 ರಂತೆ ಡಿ.ಇ.ಓ ಗಳನ್ನು ನೀಡಿದ್ದು, 06 ಕಛೇರಿಗಳಿಗೆ ತಲಾ 02 ರಂತೆ ಡಿ.ಇ.ಒ ಗಳನ್ನು ನೀಡಲಾಗಿರುತ್ತದೆ. ಕಛೇರಿವಾರು ಮಾಹಿತಿಯು ಈ ಕೆಳಕಂಡಂತಿರುತ್ತದೆ.

1) ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಗಳಿಗೆ –11
2) ಕಾರ್ಮಿಕ ಅಧಿಕಾರಿಗಳ ಕಛೇರಿಗಳಿಗೆ – 43
3) ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರುಗಳ ಕಛೇರಿಗಳಿಗೆ – 234

ಒಟ್ಟು ಡಾಟಾ ಎಂಟ್ರಿ ಆಪರೇಟರ್‌ಗಳ ಸಂಖ್ಯೆ – 288 ಇರುವುದಾಗಿ ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯಲ್ಲಿ ಈಗಾಗಲೇ ಸಾಕಷ್ಟು ಸಂಖ್ಯೆಯಲ್ಲಿ ಡಾಟಾ ಎಂಟ್ರಿ ಆಪರೇಟರ್‌ಗಳು ಇರುವ ಕಾರಣ ಪ್ರಸುತ ಡಿಇಒಗಳ ಸೇವೆ ಅಗತ್ಯವಿಲ್ಲವೆಂದು, ಮುಂದಿನ ದಿನಗಳಲ್ಲಿ ಅಗತ್ಯವಿದ್ದಲ್ಲಿ ಹೆಚ್ಚಿನ

ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಯನ್ನು ಪಡೆಯಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ –11**

**ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಬಿಎಂಟಿಸಿ ಸಂಸ್ಥೆಯಿಂದ ಹಳೆಯ ಬಸ್‌ಗಳನ್ನು ಖರೀದಿಸುವ ಕುರಿತು.**

ಮಂಡಳಿಯ ವತಿಯಿಂದ ಕಟ್ಟಡ ಕಾರ್ಮಿಕರು ಕೆಲಸ ಮಾಡುವ ಪ್ರದೇಶಗಳಲ್ಲಿ ಅವರ ಮಕ್ಕಳ ಪಾಲನೆ, ಪೋಷಣೆ ಮಾಡಲು ರಾಜ್ಯದಾದ್ಯಂತ 100 ಶಿಶುಪಾಲನಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಅದರಲ್ಲಿ 2020–21 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಭಾಷಣದಲ್ಲಿ ಘೋಷಣೆಯಾಗಿರುವಂತೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ 10 ಶಿಶುಪಾಲನಾ ಕೇಂದ್ರಗಳನ್ನು ಸಂಚಾರಿ ಶಿಶುಪಾಲನಾ ಕೇಂದ್ರಗಳಾಗಿ ಮಾಡಲು ನಿರ್ಣಯಿಸಿರುತ್ತದೆ. ಈ ಸಂಬಂಧ ಬಿ.ಎಂ.ಟಿ.ಸಿ ಸಂಸ್ಥೆಯವರು ಸಂಚಾರಿ ಶಿಶುಪಾಲನಾ ಕೇಂದ್ರಕ್ಕೆ ಅನುಕೂಲವಾಗಲು ಬಸ್‌ಗಳನ್ನು ವಿನ್ಯಾಸಿಸಿ ಕೊಡುವುದಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯಲ್ಲಿ 05 ಬಿ.ಎಂ.ಟಿ.ಸಿ ಬಸ್‌ಗಳ ಖರೀದಿಗೆ ಒಟ್ಟು 15,08,953/– ಗಳೆಂದು ಜಿ.ಎಸ್.ಟಿ (ಶೇಕಡ 18 ರಷ್ಟು) ಶುಲ್ಕ ರೂ. 2,71,612/– ಎಂದು ತಿಳಿಸಿರುತ್ತಾರೆ. ಹಾಗೆಯೇ ಸದರಿ ಬಸ್‌ಗಳ ಒಳ ಮತ್ತು ಹೊರಭಾಗದ ವಿನ್ಯಾಸಕ್ಕಾಗಿ ಒಟ್ಟು ರೂ. 8,75,000/– ಗಳ ವೆಚ್ಚ ತಗಲಲಿದೆ ಎಂದು ತಿಳಿಸಿರುತ್ತಾರೆ. ಈ ಎಲ್ಲಾ ವೆಚ್ಚಗಳು ಸೇರಿ ಒಟ್ಟು ರೂ. 26,55,565/– ಗಳಾಗಲಿದೆ. ಈ ಪ್ರಸ್ತಾವನೆಯ ಪ್ರಕಾರ ತಲಾ ಒಂದು ಬಸ್ ಖರೀದಿಗೆ ರೂ. 5,31,113/– ವೆಚ್ಚ ತಗಲಲಿದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಸಂಚಾರಿ ಶಿಶುಪಾಲನಾ ಕೇಂದ್ರಗಳನ್ನು ತೆರೆಯಲು ಬಿಎಂಟಿಸಿ ಸಂಸ್ಥೆಯಿಂದ ಹಳೆಯ ಬಸ್‌ಗಳನ್ನು ಖರೀದಿಸುವ ವಿಷಯವನ್ನು ಮುಂದೂಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ –12**

**ಕಾರ್ಮಿಕ ಸೇವಾ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸುವ ಕುರಿತು.**

ದಿನಾಂಕ : 21.10.2019 ರಂದು ಮಾನ್ಯ ಕಾರ್ಮಿಕ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕಾರ್ಮಿಕರ ನೆರವಿಗಾಗಿ ಕಟ್ಟಡ ಕಾರ್ಮಿಕರ ಸೇವಾ ಕೇಂದ್ರಗಳನ್ನು ತೆರೆಯಲು ತೀರ್ಮಾನಿಸಲಾಗಿರುತ್ತದೆ. ಆದರೆ, ಈಗಾಗಲೇ ಕಾರ್ಮಿಕ ಇಲಾಖೆ ಅಡಿಯ ಮತ್ತೊಂದು ಮಂಡಳಿಯಾದ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಪ್ರತಿ ತಾಲ್ಲೂಕು ಕೇಂದ್ರಗಳಲ್ಲಿ ಕಾರ್ಮಿಕರ ಸೇವಾ ಕೇಂದ್ರಗಳನ್ನು ಸರ್ಕಾರದ ಆದೇಶದನ್ವಯ ಆಯಾ ಹಿರಿಯ / ಕಾರ್ಮಿಕ ನಿರೀಕ್ಷಕರುಗಳ ಕಛೇರಿಗಳಲ್ಲಿ ತೆರೆಯಲಾಗಿರುತ್ತದೆ.

ಪ್ರಸ್ತುತ ರಾಜ್ಯದಾದ್ಯಂತ 158 ಕಾರ್ಮಿಕರ ಸೇವಾ ಕೇಂದ್ರಗಳ ಕಾರ್ಯನಿರ್ವಹಿಸುತ್ತಿವೆ. ಈ ಸೇವಾ ಕೇಂದ್ರಗಳು ಅಸಂಘಟಿತ ವಲಯಕ್ಕೆ ಸೇರಿದ ಕಟ್ಟಡ ಕಾರ್ಮಿಕರ ನೆರವಿಗೂ ಸಹ ಸ್ಪಂದಿಸುತ್ತಿವೆ. ಈ ಹಿನ್ನಲೆಯಲ್ಲಿ ಮಂಡಳಿಯಿಂದ ರಾಜ್ಯದ ಪ್ರತಿ ತಾಲ್ಲೂಕು ಕೇಂದ್ರಗಳ ಬದಲಾಗಿ ಪ್ರತಿ ಜಿಲ್ಲಾ ಕೇಂದ್ರಸ್ಥಾನದಲ್ಲಿರುವ ಕಾರ್ಮಿಕ ಅಧಿಕಾರಿಗಳ ಕಛೇರಿಯಲ್ಲಿ ಕಾರ್ಮಿಕರ ಸೇವಾ ಕೇಂದ್ರಗಳನ್ನು ಸ್ಥಾಪಿಸಬಹುದಾಗಿದೆ. ಈ ಸೇವಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಮಂಡಳಿಯಿಂದ ಹೊರಗುತ್ತಿಗೆ ಮೂಲಕ ಎರಡು ಡಿ.ಇ.ಓ ಗಳನ್ನು ನಿಯೋಜಿಸಬಹುದಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ ಕಾರ್ಮಿಕ ಸೇವಾ ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಸ್ಥಾಪಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

## ಕಾರ್ಯಸೂಚಿ -13

**ಪಿಂಚಣಿ ಮತ್ತು ದುರ್ಬಲತೆ ಪಿಂಚಣಿ ಸೌಲಭ್ಯಗಳ ಮಂಜೂರಾತಿ ಮತ್ತು ವಿತರಣಾ ಅಧಿಕಾರವನ್ನು ಕ್ಷೇತ್ರಮಟ್ಟದ ಅಧಿಕಾರಿಗಳಿಗೆ ವಿಕೇಂದ್ರಿಕರಿಸುವ ಕುರಿತು.**

ಮಂಡಳಿಯ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳಲ್ಲಿ ಪ್ರಮುಖವಾದ ಯೋಜನೆ ಪಿಂಚಣಿ ಸೌಲಭ್ಯವಾಗಿರುತ್ತದೆ. ನೋಂದಾಯಿತ ಕಾರ್ಮಿಕರು 60 ವರ್ಷ ವಯಸ್ಸು ಪೂರೈಸಿದ ನಂತರ ಅವರ ಜೀವಿತಾವಧಿವರೆಗೆ ಮತ್ತು ಅವರ ಮರಣದ ನಂತರ ಅವರ ಅವಲಂಬಿತರಿಗೆ ಕೌಟುಂಬಿಕ ಪಿಂಚಣಿ ನೀಡುವ ಯೋಜನೆಯಾಗಿರುತ್ತದೆ. ಈ ಯೋಜನೆಯನ್ನು 2016 ನೇ ಸಾಲಿನಿಂದ ಪ್ರಾರಂಭಿಸಿ ಕೇಂದ್ರ ಕಛೇರಿಯ ಮೂಲಕ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪ್ರತಿ ಮಾಹೆ ಪಿಂಚಣಿ ಮೊತ್ತವನ್ನು ಜಮಾ ಮಾಡಲಾಗುತ್ತಿದೆ.

ಪ್ರಸ್ತುತ ಮಂಡಳಿಯಲ್ಲಿ 1822 ಫಲಾನುಭವಿಗಳಿಗೆ ಪಿಂಚಣಿ ಸೌಲಭ್ಯ ಮಂಜೂರಾಗಿರುತ್ತದೆ. 33 ಫಲಾನುಭವಿಗಳಿಗೆ ದುರ್ಬಲತೆ ಪಿಂಚಣಿ ಸೌಲಭ್ಯ ಮಂಜೂರಾಗಿರುತ್ತದೆ. ಈ ಫಲಾನುಭವಿಗಳ ಸಂಖ್ಯೆಯು ಪ್ರತಿ ಮಾಹೆ ಗಣನೀಯವಾಗಿ ಹೆಚ್ಚಳವಾಗುತ್ತಿರುತ್ತದೆ. ಹಾಗಾಗೀ ಈ ಸೌಲಭ್ಯಗಳನ್ನು ವಿಭಾಗ ಮಟ್ಟಕ್ಕೆ ಮಂಜೂರಾತಿ ಅಧಿಕಾರವನ್ನು ವಿಕೇಂದ್ರಿಕರಿಸಿ ನಿಗದಿತ ಅವಧಿಯಲ್ಲಿ ಕ್ಲೈಮ್ ಅರ್ಜಿಗಳನ್ನು ವಿಲೇವಾರಿ ಮಾಡಲು ಮತ್ತು ಪ್ರತಿ ಮಾಹೆ ನಿಗದಿತ ದಿನಾಂಕಕ್ಕೆ ಪಿಂಚಣಿ ಮೊತ್ತವು ಫಲಾನುಭವಿಗಳಿಗೆ ತಲುಪಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಆದಕಾರಣ, ಪಿಂಚಣಿ ಮತ್ತು ದುರ್ಬಲತೆ ಪಿಂಚಣಿ ಸೌಲಭ್ಯಗಳ ಮಂಜೂರಾತಿ ಅಧಿಕಾರಿಗಳನ್ನಾಗಿ ವಿಭಾಗ ಮಟ್ಟದ ಸಹಾಯಕ ಕಾರ್ಮಿಕ ಆಯುಕ್ತರುಗಳನ್ನು ನೇಮಿಸಬಹುದಾಗಿರುತ್ತದೆ ಎಚಿದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಪಿಂಚಣಿ ಮತ್ತು ದುರ್ಬಲತೆ ಪಿಂಚಣಿ ಸೌಲಭ್ಯಗಳ ಮಂಜೂರಾತಿ ಮತ್ತು ವಿತರಣಾ ಅಧಿಕಾರವನ್ನು ವಿಭಾಗ ಮಟ್ಟದ ಸಹಾಯಕ ಕಾರ್ಮಿಕ ಆಯುಕ್ತರುಗಳಿಗೆ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 14**

**ಶ್ರಮ ಸಾಮರ್ಥ್ಯ ಟ್ರೈನಿಂಗ್ ಕಮ್ ಟೂಲ್‌ಕಿಟ್ ಸೌಲಭ್ಯವನ್ನು ಬಾಕಿ ಉಳಿದ 11 ಜಿಲ್ಲೆಗಳಿಗೆ ವಿಸ್ತರಿಸುವ ಕುರಿತು.**

ಮಂಡಳಿಯ ಫಲಾನುಭವಿಗಳಿಗೆ ಶ್ರಮ ಸಾಮರ್ಥ್ಯ (ಟ್ರೈನಿಂಗ್ ಕಂ ಟೂಲ್ ಕಿಟ್) ಯೋಜನೆಯಡಿಯಲ್ಲಿ ನಿರ್ಮಿತಿ ಕೇಂದ್ರಗಳ ಮೂಲಕ ತರಬೇತಿಯನ್ನು ಸರ್ಕಾರದ ಆದೇಶ ಸಂಖ್ಯೆ : ಕಾಇ 196 ಎಲ್‌ಇಟಿ 2017, ದಿನಾಂಕ : 24.11.2017 ರನ್ವಯ 19 ಜಿಲ್ಲೆಗಳಲ್ಲಿ ನೀಡಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳು ಯಶಸ್ವಿಯಾಗಿ ಸಾಗಿದ್ದು, ಕಾರ್ಮಿಕರ ಕೌಶಲ್ಯವನ್ನು ವೃದ್ಧಿಸುವಲ್ಲಿ ಸಹಕಾರಿಯಾಗಿರುತ್ತದೆ. ಅದೇ ರೀತಿ ಬಾಕಿ ಉಳಿದ 11 ಜಿಲ್ಲೆಗಳಾದ ಬಾಗಲಕೋಟೆ, ಬೆಳಗಾವಿ, ಬೀದರ್, ಚಾಮರಾಜನಗರ, ಚಿಕ್ಕಮಗಳೂರು, ಧಾರವಾಡ, ಹಾಸನ, ಕೊಡಗು, ಮಂಡ್ಯ, ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೂ ಸಹಾ ಆಯಾ ಜಿಲ್ಲೆಗಳ ನಿರ್ಮಿತಿ ಕೇಂದ್ರಗಳ ಮೂಲಕ ಶ್ರಮ ಸಾಮರ್ಥ್ಯ ಯೋಜನೆಯನ್ನು ಅನುಷ್ಠಾಗೊಳಿಸಬಹುದಾಗಿದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಶ್ರಮ ಸಾಮರ್ಥ್ಯ ಟ್ರೈನಿಂಗ್ ಕಮ್ ಟೂಲ್‌ಕಿಟ್ ಸೌಲಭ್ಯವನ್ನು ಬಾಕಿ ಉಳಿದ 11 ಜಿಲ್ಲೆಗಳಿಗೆ ವಿಸ್ತರಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 15**

**ಮಂಡಳಿಯSocial Auditಕಾರ್ಯವನ್ನು ಕೈಗೊಳ್ಳುವ ಕುರಿತು.**

ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಡಿಒ ನಂ ಝಡ್–20012/9/2018 – ಬಿಎಎಲ್ (ಪಿಟಿ) ರಲ್ಲಿ ದಿನಾಂಕ ಆಗಸ್ಟ್ – 2019 ರಂದುSocial Audit ಕಾರ್ಯವನ್ನು ನಡೆಸುವ ಸಂಬಂಧ ನೀಡಿರುವ ಫ್ರೇಮ್ ವರ್ಕ್‌ನಲ್ಲಿ Social Audit ಅನ್ನು ಕೈಗೊಳ್ಳುವ ಕುರಿತು ಮಾರ್ಗದರ್ಶನ ನೀಡಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ : 05.11.2019 ರಂದು ಸರ್ಕಾರವು ಪತ್ರ ಸಂಖ್ಯೆ : ಇ–ಕಾಇ 47 ಎಲ್‌ಇಟಿ 2019 ಅನ್ನು ಹೊರಡಿಸಿ Public Affairs Centerಈ ಸಂಸ್ಥೆಯು ಮಂಡಳಿಯ Social Auditಅನ್ನು ರೂ. 67.14 ಲಕ್ಷದಲ್ಲಿ ಕೈಗೊಳ್ಳಲು ಕೆಟಿಪಿಪಿ ಕಾಯ್ದೆಯ ಕಲಂ 4(ಜಿ) ಅಡಿ ವಿನಾಯಿತಿ ನೀಡಿರುತ್ತದೆ. ಅದರಂತೆ Public Affairs Centerಇವರು ಕರಡು MOUಅನ್ನು ಸಿದ್ಧಪಡಿಸಿ ಮಂಡಳಿಯ

ಅನುಮೋದನೆಗೆ ಸಲ್ಲಿಸಿರುತ್ತಾರೆ. ಆದರೆ, ಸದರಿ ಒಔಗ ನಲ್ಲಿ ಕೇವಲ ರಾಜ್ಯದ ಫೇಸ್ – 1 ಅನ್ನು ಮಾತ್ರ ಆಯ್ಕೆ ಮಾಡಿಕೊಂಡು ರೂ. 67.14 ಲಕ್ಷ ವೆಚ್ಚದಲ್ಲಿ Social Auditಮಾಡುವುದಾಗಿ ನಮೂದಿಸಿರುತ್ತಾರೆ. ಆದರೆ, ಕೇಂದ್ರ ಸರ್ಕಾರವು ನೀಡಿರುವ ಫ್ರೇಮ್ ವರ್ಕ್‌ನಲ್ಲಿ ರಾಜ್ಯದ ಪ್ರತಿ ವಾರ್ಡ್ ಮತ್ತು ಬ್ಲಾಕ್‌ನಲ್ಲಿ Social Auditಕಾರ್ಯವನ್ನು ನಡೆಸುವಂತೆ ನಿರ್ದೇಶನ ನೀಡಿರುವುದಾಗಿ ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ ಮಂಡಳಿಯSocial Audit ಕಾರ್ಯವನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವನ್ನು ಮಂಡಳಿಯ ಕಾರ್ಯದರ್ಶಿಯವರಿಗೆ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 16**

**ಮಂಡಳಿಯ ರೆವೆನ್ಯೂ ಮತ್ತು ಫೈನಾನ್ಸ್ ಕೆಲಸಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವ ದೆಸೆಯಲ್ಲಿ ಓರ್ವ ಐ.ಆರ್.ಎಸ್. ಅಧಿಕಾರಿಯ ಸೇವೆಯನ್ನು ನಿಯೋಜನೆ ಮೇಲೆ ಪಡೆಯುವ ಕುರಿತು.**

ದಿನಾಂಕ : 04.11.2019 ರಂದು ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ಪುನರ್ ಪರಿಶೀಲನಾ ಸಭೆಯಲ್ಲಿ ಮಂಡಳಿಯಲ್ಲಿ ಹಣಕಾಸಿನ ವ್ಯವಹಾರ ಹೆಚ್ಚಾಗಿರುವ್ಯದರಿಂದ ಅದರ ನಿರ್ವಹಣೆಗಾಗಿ ಕಾರ್ಯದರ್ಶಿ (ಕಂದಾಯ ಮತ್ತು ಹಣಕಾಸು) ಆಗಿ ಐ.ಆರ್.ಎಸ್ ಅಧಿಕಾರಿಯೊಬ್ಬರನ್ನು ನಿಯೋಜನೆ ಮೇರೆಗೆ ನಿಯೋಜಿಸಿಕೊಳ್ಳುವುದು, ಅವರು ಮಂಡಳಿಯ ಕಾರ್ಯದರ್ಶಿಯವರು ಅಧೀನದಲ್ಲಿ ಕೆಲಸ ನಿರ್ವಹಿಸಬೇಕೆಂದು ತಿಳಿಸಲಾಗಿರುತ್ತದೆ. ಮಂಡಳಿಯಲ್ಲಿ ಕೆಲಸ ನಿರ್ವಹಿಸಲು ಅನುಮೋದಿತಗೊಂಡಿರುವ ಹುದ್ದೆಗಳಲ್ಲಿ ಸದರಿ ಹುದ್ದೆಯ ನೇಮಕಾತಿಗೆ ಅವಕಾಶವಿರುವುದಿಲ್ಲವೆಂದು ಮಂಡಳಿಯ ಕಾರ್ಯದರ್ಶಿಯವರು ದಿನಾಂಕ: 30.12.2019ರಂದು ಐ.ಆರ್.ಎಸ್. ಅಧಿಕಾರಿಯೊಬ್ಬರನ್ನು ಮಂಡಳಿಯಲ್ಲಿ ನಿಯೋಜಿಸಬೇಕಾದಲ್ಲಿ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆದ ನಂತರ ಸರ್ಕಾರದಿಂದ ಆದೇಶ ಪಡೆದು ನಿಯೋಜಿಸಬಹುದಾಗಿದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯ ರೆವೆನ್ಯೂ ಮತ್ತು ಫೈನಾನ್ಸ್ ಕೆಲಸ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವ ದೆಸೆಯಲ್ಲಿ ಓರ್ವ ಐ.ಆರ್.ಎಸ್. ಅಧಿಕಾರಿಯ ಸೇವೆಯನ್ನು ಪಡೆಯಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಬದಲಾವಣೆ ಮಾಡಬೇಕಿರುವುದರಿಂದ ಈ ವಿಷಯವನ್ನು ಮೂಂದೂಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 17**

**ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆ ನಡೆಸಲು ಉದ್ದೇಶಿಸಿರುವ ತರಬೇತಿ ಕಾರ್ಯಕ್ರಮಗಳು, ಇಂಟರ್ನ್‌ಶಿಪ್ ಮತ್ತು ಸಂಶೋಧನೆ, ಐಇಸಿ, ಕಾರ್ಯಕ್ರಮಗಳಿಗೆ ತಗುಲುವ ವೆಚ್ಚಕ್ಕೆ ಮಂಡಳಿ ವತಿಯಿಂದ ರೂ. 5.00 ಕೋಟಿ ಅನುದಾನ ಬಿಡುಗಡೆ ಮಾಡುವಂತೆ ಕೋರಿರುವ ಬಗ್ಗೆ**

ದಿನಾಂಕ : 21.12.2019 ರಂದು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಅಧ್ಯಯನ ಸಂಸ್ಥೆಯ ವ್ಯವಸ್ಥಾಪಕ ಸಮಿತಿ ಸಭೆಯ ನಡವಳಿಯ ಕಂಡಿಕೆ 4ರಲ್ಲಿ ಐಇಸಿ, ಕಾರ್ಯಕ್ರಮಗಳಿಗೆ ಕಟ್ಟಡ ಮತ್ತು ಇತರೆನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ರೂ. 5.00ಕೋಟಿಗಳನ್ನು ಒದಗಿಸುವಂತೆ ತೀರ್ಮಾನ ಕೈಗೊಂಡಿರುತ್ತಾರೆ. ಅದರಂತೆ, ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆಯು ಇವರ ಪತ್ರ ಸಂಖ್ಯೆ : ಕೆಎಸ್‌ಎಲ್‌ಇ/ಸಿಬ್ಬಂದಿ/40/2019-2020 ರಲ್ಲಿ ದಿನಾಂಕ :11.02.2020 ರಂದು ಬರೆದಿರುವ ಪತ್ರದಲ್ಲಿ ತರಬೇತಿ ಕಾರ್ಯಕ್ರಮಗಳು, ಇಂಟರ್ನ್‌ಶಿಪ್ ಮತ್ತು ಸಂಶೋಧನೆ, ಐಇಸಿ, ಕಾರ್ಯಕ್ರಮಗಳಿಗೆ ತಗುಲುವ ವೆಚ್ಚವನ್ನು ಭರಿಸಲು ಮಂಡಳಿವತಿಯಿಂದ ಪ್ರಸ್ತುತ ರೂ. 2.00 ಕೋಟಿ ಅನುದಾನವನ್ನು ಮಂಡಳಿಯವತಿಯಿಂದ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಆದರೆ ಮಂಡಳಿವತಿಯಿಂದ ಈಗಾಗಲೇ ಪ್ರತ್ಯೇಕವಾಗಿ ಐಇಸಿ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಕೈಗೊಳ್ಳಲು ಟೆಂಡರ್ ಕರೆಯಲಾಗುತ್ತಿದೆ. ಈ ಹಿನ್ನಲೆಯಲ್ಲಿ ಐಇಸಿ ಕಾರ್ಯಕ್ರಮಗಳನ್ನು ಹೊರತುಪಡಿಸಿ ಬೇರೆ ಉದ್ದೇಶಿತ ಮತ್ತು ಉತ್ತೇಜಿತ ಕಾರ್ಯಕ್ರಮಗಳು ಅಂದರೆ ತರಬೇತಿ ಕಾರ್ಯಕ್ರಮಗಳು ಇಂಟರ್ನ್‌ಶಿಪ್ ಮತ್ತು ಸಂಶೋಧನೆ ಮೊದಲಾದವು ಕಟ್ಟಡ ಕಾರ್ಮಿಕರಿಗೆ ಹಮ್ಮಿಕೊಂಡಲ್ಲಿ ಅವುಗಳಿಗಾಗಿ ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಬಹುದಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಐಇಸಿ ಕಾರ್ಯಕ್ರಮಗಳಿಗಾಗಿ ಪ್ರತ್ಯೇಕ ಟೆಂಡರ್ ಅನ್ನು ಕರೆಯಲು ಹಾಗೂ ತರಬೇತಿಯನ್ನು NSDC ಇಂದ ಮಾನ್ಯತೆ ಪಡೆದ ಸಂಸ್ಥೆಗಳ ಮುಖಾಂತರ ತರಬೇತಿ ಕಾರ್ಯಕ್ರಮಗಳನ್ನ ಆಯೋಜಿಸಲು ಮಂಡಳಿಯ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

ಮುಂದುವರೆದು **ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆಯ ವತಿಯಿಂದ** ಇಂಟರ್ನ್‌ಶಿಪ್ ಮತ್ತು ಸಂಶೋಧನೆ ಕಾರ್ಯಗಳಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಪಡೆದು ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆಯುವಂತೆ ಕಾರ್ಯದರ್ಶಿಯವರಿಗೆ ಸೂಚನೆ ನೀಡಲಾಯಿತು.

**ಕಾರ್ಯಸೂಚಿ – 18**

**ಸರ್ಕಾರದ ಆದೇಶದನ್ವಯ ಮಂಡಳಿಯ ನೋಂದಣಿ ಮತ್ತು ಸೌಲಭ್ಯಗಳ ವಿತರಣಾ ಕಾರ್ಯಗಳಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕ ಬಂಧುಗಳನ್ನು ನೇಮಕ ಮಾಡಿಕೊಳ್ಳುವ ಕುರಿತು.**

ಮಂಡಳಿಯಲ್ಲಿ ಕಾರ್ಮಿಕ ನೋಂದಣಿ ನವೀಕರಣ ಮತ್ತು ಸೌಲಭ್ಯಗಳನ್ನು ವಿತರಣೆ ಮಾಡುವ ಕಾರ್ಯದಲ್ಲಿ ಸಹಕಾರ ನೀಡಲು ಸರ್ಕಾರದ ಆದೇಶ ಸಂಖ್ಯೆ ಎಲ್‌ಡಿ 287 ಎಲ್‌ಇಟಿ 2017, ದಿನಾಂಕ : 02.11.2017 ರ ಮೂಲಕ ಕಾರ್ಮಿಕ ಬಂಧುಗಳನ್ನು ಸ್ವಯಂ ಸೇವಕರಾಗಿ ಕಮಿಷನ್ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರವು ಆದೇಶಿಸಿರುತ್ತದೆ. ಈ ಕಾರ್ಮಿಕ ಬಂಧುಗಳನ್ನು ಗ್ರಾಮ ಮಟ್ಟದಲ್ಲಿ ತಲಾ 2 ಗ್ರಾಮ ಪಂಚಾಯಿತಿಗಳಿಗೆ ಒಬ್ಬರಂತೆ ಹಾಗೂ ನಗರ ವ್ಯಾಪ್ತಿಯಲ್ಲಿ 5 ರಿಂದ 10 ವಾರ್ಡ್‌ಗಳಿಗೆ ಒಬ್ಬರಂತೆ ನೇಮಿಸಿಕೊಳ್ಳಲು ತಿಳಿಸಿರುತ್ತದೆ.

ಅದರಂತೆ ಪ್ರಸ್ತುತ 750 ಕಾರ್ಮಿಕ ಬಂಧುಗಳು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತಾರೆ. ರಾಜ್ಯದಲ್ಲಿ ಒಟ್ಟು 8021 ಗ್ರಾಮ ಪಂಚಾಯಿತಿ / ವಾರ್ಡ್‌ಗಳಿದ್ದು, 2 ಪಂಚಾಯಿತಿಗಳಿಗೆ ಒಬ್ಬರಂತೆ ಅಂದರೆ 4010 ಕಾರ್ಮಿಕ ಬಂಧುಗಳ ಅವಶ್ಯಕತೆ ಇರುತ್ತದೆ. ಹಾಗಾಗೀ ಅವಶ್ಯಕ ಉಳಿದ ಕಾರ್ಮಿಕ ಬಂಧುಗಳನ್ನು ನೇಮಿಸಿಕೊಳ್ಳಬೇಕಾಗಿರುತ್ತದೆ. ಈ ಕಾರ್ಮಿಕ ಬಂಧುಗಳಿಗೆ ಅವರು ನಿರ್ವಹಿಸುವ ವಿವಿಧ ಸೇವೆಗಳಿಗೆ ನೀಡುವ ಕಮಿಷನ್ ಜೊತೆಗೆ ಮಾಸಿಕ 6,000/- ಗಳ ಗೌರವಧನ ನೀಡಬಹುದಾಗಿರುತ್ತದೆ. ಹಾಗೆಯೇ ಇವರುಗಳ ಮಂಡಳಿಯ ಕಾರ್ಯಗಳನ್ನು ಆನ್‌ಲೈನ್ ಮೂಲಕ ನಿರ್ವಹಿಸಲು ತಲಾ ಒಂದು ಟ್ಯಾಬ್ ಅನ್ನು ಸಹ ವಿತರಿಸಬಹುದಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

ಮಂಡಳಿಯ ಅಧ್ಯಕ್ಷರು ಮಾತನಾಡಿ ನೇಮಕಗೊಳ್ಳುವ ಕಾರ್ಮಿಕ ಬಂಧುಗಳಿಗೆ ನೀಡುವ ಕಮೀಷನ್ ಜೊತೆಗೆ ರೂ.6000 ಮಾಸಿಕ ಗೌರವಧನ ಮತ್ತು ರೂ.1000 ಸಾರಿಗೆ ವೆಚ್ಚವನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ:**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯ ನೋಂದಣಿ ಮತ್ತು ಸೌಲಭ್ಯಗಳ ವಿತರಣಾ ಕಾರ್ಯಗಳಿಗಾಗಿ ಪ್ರತಿ 3 ಗ್ರಾಮ ಪಂಚಾಯಿತಿಗೆ ಹಾಗೂ ಹಿಂದಿನ ಆದೇಶದಂತೆ ನಗರ ವ್ಯಾಪ್ತಿಯಲ್ಲಿ 5 ರಿಂದ 10 ವಾರ್ಡ್‌ಗಳಿಗೆ ಓರ್ವ ಕಾರ್ಮಿಕ ಬಂಧುಗಳನ್ನು ನೇಮಕ ಮಾಡಿಕೊಳ್ಳಲು ಮತ್ತು ಕಮೀಷನ್ ಜೊತೆಗೆ ರೂ.6000 ಮಾಸಿಕ ಗೌರವಧನ ಮತ್ತು ರೂ.1000 ಸಾರಿಗೆ ವೆಚ್ಚವನ್ನು ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಅಲ್ಲದೇ ಈ ಹಿಂದೆ ನೇಮಕಗೊಂಡಿರುವ ಅರ್ಹ ಕಾರ್ಮಿಕ ಬಂಧುಗಳಿಗೆ ಪ್ರಾರಂಭದಿಂದ ಇಲ್ಲಿಯವರೆಗೆ ಪ್ರತಿ ಮಾಹೆ ರೂ.1000/- ಗಳ ಗೌರವಧನ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 19**

**ಕಾರ್ಮಿಕರಿಗೆ ಪರಿಹಾರವನ್ನು ನೇರವಾಗಿ DBT ಮೂಲಕ ಒದಗಿಸುವ ಕುರಿತು.**

ಮಂಡಳಿಯಿಂದ ಪ್ರಸ್ತುತ ನೀಡಲಾಗುತ್ತಿರುವ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಸಹಾಯಧನದ ಮೊತ್ತವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡುವ ವ್ಯವಸ್ಥೆ ಕುರಿತು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಕಾರ್ಮಿಕರಿಗೆ ಪರಿಹಾರವನ್ನು ನೇರವಾಗಿ ಬ್ಯಾಂಕ್ ಖಾತೆಗಳಿಗೆ ಒದಗಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 20**

**ಮಂಡಳಿಯ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು ಮತ್ತು ಮಂಡಳಿಯ ಮಾನ್ಯ ಅಧ್ಯಕ್ಷರಿಗೆ ವಿಶೇಷ ವಿತ್ತಾಧಿಕಾರ ನೀಡುವ ಕುರಿತು.**

ಮಂಡಳಿಯಲ್ಲಿ ಕಾಯ್ದೆ ನಿಯಮಗಳನುಸಾರ ರೂಪಿಸಿರುವ ಸೌಲಭ್ಯಗಳನ್ನು ಒದಗಿಸಲು ಮಂಡಳಿಯ ಕಾರ್ಯದರ್ಶಿಯವರಿಗೆ ಅವಕಾಶವಿರುತ್ತದೆ. ಆದರೆ ನಿಯಮಗಳನ್ನು ಹೊರತುಪಡಿಸಿಕಾರ್ಮಿಕರಿಗೆ ನೀಡಲಾಗುವ ಪರಿಹಾರ ಮೊತ್ತವನ್ನು ನಿಗದಿಪಡಿಸಲು ಈ ಕೆಳಕಂಡಂತೆ ಆರ್ಥಿಕ ಅಧಿಕಾರವನ್ನು ವಿಕೇಂದ್ರಿಕರಿಸಬಹುದಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

ಮಂಡಳಿಯ ಕಾರ್ಯದರ್ಶಿಗಳು –ರೂ. 2 ಲಕ್ಷಗಳವರೆಗೆ

ಸರ್ಕಾರದ ಕಾರ್ಯದರ್ಶಿಗಳು – ರೂ. 5 ಲಕ್ಷಗಳವರೆಗೆ

ಮಂಡಳಿಯ ಮಾನ್ಯ ಅಧ್ಯಕ್ಷರಿಗೆ – ರೂ. 10 ಲಕ್ಷಗಳವರೆಗೆ

**ಮಂಡಳಿಯ ನಿರ್ಣಯ :** ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಮಂಡಳಿಯ ಕಾರ್ಯದರ್ಶಿಗಳು, ಸರ್ಕಾರದ ಕಾರ್ಯದರ್ಶಿಗಳು ಮತ್ತು ಮಂಡಳಿಯ ಮಾನ್ಯ ಅಧ್ಯಕ್ಷರಿಗೆ ವಿಶೇಷ ವಿತ್ತಾಧಿಕಾರ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 21**

**2019–20 ನೇ ಸಾಲಿನ ಆಯವ್ಯಯದಲ್ಲಿ ಮಂಜೂರಾಗಿದ್ದು, ಮುಂದುವರಿಕೆ ಪ್ರಸ್ತಾವನೆಗಳ ಕುರಿತು.**

2019–20ನೇ ಸಾಲಿನಲ್ಲಿ ಆಯವ್ಯಯದಲ್ಲಿ ವಿವಿಧ ಸೌಲಭ್ಯಗಳಿಗಾಗಿ ಮೀಸಲಿಡಲಾಗಿದ್ದ ಮೊತ್ತವನ್ನು ಖರ್ಚು ಮಾಡದೇ ಬಾಕಿ ಉಳಿದಿರುವುದು ಕಂಡು ಬಂದಿರುತ್ತದೆ. ಅಂತಹ ಸೌಲಭ್ಯಗಳೆಂದರೆ 1) ಶ್ರಮ ಸಾಮರ್ಥ್ಯ ತರಬೇತಿ ಸೌಲಭ್ಯ 2) ಕಾರ್ಮಿಕ ಶ್ರಮ ಸನ್ಮಾನ 3) ಆರ್‌ಪಿಎಲ್ ಯೋಜನೆ 4) ಕೆಎಸ್‌ಆರ್‌ಟಿಸಿ ಬಸ್‌ಪಾಸ್ ಸೌಲಭ್ಯ 5) ಕುಟುಂಬ ಪಿಂಚಣಿ 6) ಪಿಎಂಎಸ್‌ವೈಎಂ ಪಿಂಚಣಿ ಯೋಜನೆ 7) ಕಾರ್ಮಿಕ ಗೃಹಭಾಗ್ಯ ಸೌಲಭ್ಯ 8) ತಾತ್ಕಾಲಿಕ ವಸತಿ ಸಮುಚ್ಚಯ ಮತ್ತು 9) ಕನ್ನಡಕ ಶ್ರವಣಯಂತ್ರ ಕೃತಕ ಕೈಕಾಲು ಮತ್ತು ಕುರ್ಚಿ ಮರುಪಾವತಿ ಸೌಲಭ್ಯ ಈ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 2020–21 ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆಸಲಾಗುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, 2019–20 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಸೌಲಭ್ಯಗಳಿಗಾಗಿ ಮೀಸಲಿಡಲಾಗಿದ್ದ ಮೊತ್ತವನ್ನು ಖರ್ಚು ಮಾಡದೇ ಬಾಕಿ ಉಳಿದಿರುವುದರಿಂದ, ಮಂಡಳಿಯ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು 2020–21 ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (I)**

**ಕಾರ್ಮಿಕ ಗೃಹ ಭಾಗ್ಯ ಯೋಜನೆಯನ್ನು ವಸತಿ ಇಲಾಖೆ ಮುಖೇನ ಅನುಷ್ಠಾನಗೊಳಿಸಲು ಅನುದಾನ ಬಿಡುಗಡೆ ಮಾಡಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಬಗ್ಗೆ.**

ದಿನಾಂಕ : 08.07.2019 ಮತ್ತು 05.08.2019 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಚರ್ಚೆ ನಡೆದುಹಿಂದಿನ ವರ್ಷ ಮಂಡಳಿಯಲ್ಲಿ ಸಂಗ್ರಹವಾದ ಸುಂಕದ ಮೊತ್ತದ ಶೇ 10ರಷ್ಟು ಮೊತ್ತವನ್ನು ವಸತಿ ಯೋಜನೆಗಾಗಿ ಬಳಸಲು ವಸತಿ ಇಲಾಖೆಗೆ ಬಿಡುಗಡೆ ಮಾಡುವಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಆದೇಶಿಸಿರುತ್ತಾರೆ.

ಅದರಂತೆ, ಮಂಡಳಿಯ ಫಲಾನುಭವಿಗಳಿಗೆ ಕಾರ್ಮಿಕ ಗೃಹಭಾಗ್ಯ ಸೌಲಭ್ಯದಡಿ ಮನೆ ನಿರ್ಮಾಣಕ್ಕೆ ಅಗತ್ಯ ಮೊತ್ತವನ್ನು ಕಲ್ಪಿಸಿಕೊಡುವ ದಿಸೆಯಲ್ಲಿ ದಿನಾಂಕ : 05.11.2019 ರಂದು ರೂ.76 ಕೋಟಿಗಳನ್ನು ಕಾರ್ಯದರ್ಶಿಗಳು, ವಸತಿ ಇಲಾಖೆ ಇವರಿಗೆ ಬಿಡುಗಡೆ ಮಾಡಲಾತರುತ್ತದೆ ಎಚಿದು ಸಭೆಗೆ ಮಂಡಿಸಲಾಯಿತು. ಮಾನ್ಯ ಮಂಡಳಿಯ ಅಧ್ಯಕ್ಷರು ಮಾತನಾಡಿ ಮಂಡಳಿಯಿಂದ ವಸತಿ ಇಲಾಖೆಗೆ ನೀಡಿರುವ ಅನುದಾನಕ್ಕೆ ಸಂಬಂಧಿಸಿದಂತೆ ಸೌಲಭ್ಯವನ್ನಪಡೆದಿರುವ ಫಲಾನುಭವಿಗಳ ವಿವರಗಳನ್ನು ಪಡೆದುಕೊಳ್ಳುವಂತೆ ತಿಳಿಸಿದರು.

**ಮಂಡಳಿಯ ನಿರ್ಣಯ** :ಮಂಡಳಿಯ ಫಲಾನುಭವಿಗಳಿಗೆ ಕಾರ್ಮಿಕ ಗೃಹಭಾಗ್ಯ ಸೌಲಭ್ಯದಡಿ ಮನೆ ನಿರ್ಮಾಣಕ್ಕೆ ಅಗತ್ಯ ಮೊತ್ತವನ್ನು ಕಲ್ಪಿಸಿಕೊಡುವ ದಿಸೆಯಲ್ಲಿ ದಿನಾಂಕ : 05.11.2019 ರಂದು ರೂ. 76 ಕೋಟಿಗಳನ್ನು ಕಾರ್ಯದರ್ಶಿಗಳು, ವಸತಿ ಇಲಾಖೆ ಇವರಿಗೆ ಬಿಡುಗಡೆ ಮಾಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (II)**

**ಸರ್ಕಾರದ ಆದೇಶದನ್ವಯ ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿ 24x7 ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು**

ಸರ್ಕಾರದ ಆದೇಶ ಸಂಖ್ಯೆ : ಕಾಇ ಇಕಛೇರಿ 6 ಸ್ವೀಮರ / 2019, ದಿನಾಂಕ : 07.08.2019 ರ ಪ್ರಕಾರ ಕಾರ್ಮಿಕ ಸಚಿವಾಲಯಕ್ಕೆ ಸಂಬಂಧಪಟ್ಟ ಕಾರ್ಮಿಕ ಇಲಾಖೆ, ಕಾರ್ಖಾನೆಗಳು, ಬಾಯ್ಲರುಗಳ ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಕಲ್ಯಾಣ ಭದ್ರತಾ ಮಂಡಳಿ, ರಾಜ್ಯ ವಿಮಾ ಇಲಾಖೆ, ಕಾರ್ಮಿಕರ ಕಲ್ಯಾಣ ಮಂಡಳಿ ಮತ್ತು ಕರ್ನಾಟಕ ಕಾರ್ಮಿಕ ಅಧ್ಯಯನ ಸಂಸ್ಥೆಗಳ ಕಾರ್ಯಚಟುವಟಿಕೆಗಳಿಗೆ ಸಂಬಂಧಪಟ್ಟ ಮಾಹಿತಿ / ದೂರು ಆಲಿಸಲು ಹಾಗೂ ಸಂಬಂಧಪಟ್ಟವರಿಂದ ಪರಿಹಾರ ಒದಗಿಸಲು 3 ಪಾಳಿಗಳಲ್ಲಿ ಕಾರ್ಯನಿರ್ವಹಿಸಲು ಸಿಬ್ಬಂದಿಗಳನ್ನು ನೇಮಿಸಿಕೊಂಡು ಕಂಟ್ರೋಲ್ ರೂಂನೊಂದಿಗೆ 4ನೇ ಮಹಡಿಯಲ್ಲಿ 24x7 ಸಹಾಯವಾಣಿ ಕೇಂದ್ರವನ್ನು ಪ್ರಾರಂಭಿಸಲಾಗಿದೆ.

ಈ ಸಹಾಯವಾಣಿಯ ಉದ್ಘಾಟನೆಯನ್ನು ದಿನಾಂಕ : 04.02.2020 ರಂದು ಸನ್ಮಾನ್ಯ ಮುಖ್ಯಮಂತ್ರಿಯವರು ನೆರವೇರಿಸಿರುತ್ತಾರೆ. ಸಹಾಯವಾಣಿ ಸ್ಥಾಪನೆ ಮತ್ತು ನಿರ್ವಹಣೆಗಾಗಿ ಮಂಡಳಿಯಿಂದ ಇದುವರೆಗೂ ರೂ. 50,96,016/– ಗಳಷ್ಟು ಮೊತ್ತವನ್ನು ಖರ್ಚು ಮಾಡಲಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಸರ್ಕಾರದ ಆದೇಶದನ್ವಯ ಕಲ್ಯಾಣ ಸುರಕ್ಷಾ ಭವನದ 4ನೇ ಮಹಡಿಯಲ್ಲಿ 24x7 ಸಹಾಯವಾಣಿ ಕೇಂದ್ರವನ್ನು ಪ್ರಾರಂಭಮಾಡಿರುವುದಕ್ಕೆ ಮತ್ತು ಮೇಲ್ಕಂಡ ಖರ್ಚುಗಳಿಗೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (III)**

**ನೋಂದಾಯಿತರಲ್ಲದ ಕಟ್ಟಡ ಕಾರ್ಮಿಕರಿಗೆ ನೀಡಿರುವ ಅಪಘಾತ ಪರಿಹಾರ ಮೊತ್ತದ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.**

ದಿನಾಂಕ : 18.01.2019 ರಂದು ನಡೆದ 27ನೇ ಸಭೆಯಲ್ಲಿ ಅಪಘಾತದಿಂದ ಮೃತಪಟ್ಟ ನೋಂದಾಯಿತರಲ್ಲದ ನಿರ್ಮಾಣ ಕಾರ್ಮಿಕರಿಗೆ ವಿಶೇಷ ಪ್ರಕರಣವೆಂದು ಪರಿಗಣಿಸಿ ಮರಣ ಮತ್ತು ಗಾಯಗೊಂಡ ಕ್ಟಟ್ಟಡ ಕಾರ್ಮಿಕರ ಅವಲಂಬಿತರಿಗೆ ಪರಿಹಾರ ನೀಡುವ ವಿಷಯವನ್ನು ಮಂಡಳಿಯು ಸರ್ವಾನುಮತದಿಂದ ಅನುಮೋದಿಸಿ ಮೊತ್ತವನ್ನು ನಿಗದಿ ಪಡಿಸುವ ಅಧಿಕಾರವನ್ನು ಮಂಡಳಿಯ ಕಾರ್ಯದರ್ಶಿಯವರಿಗೆ ನೀಡಿತ್ತು. ಅದರಂತೆ ಇದುವರೆಗೂ 13 ನೋಂದಾಯಿತರಲ್ಲದ ಮೃತ ಕಾರ್ಮಿಕರ ಅವಲಂಬಿತರಿಗೆ ರೂ. 29,00,000/- ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಮುಂದುವರೆದು, ರಾಜ್ಯಾದ್ಯಂತ ವಿವಿಧ ಕಟ್ಟಡ ನಿರ್ಮಾಣ ಅಪಘಾತಗಳಲ್ಲಿ ಮೃತಪಟ್ಟ ನೋಂದಾಯಿತರಲ್ಲದ 10 ಕಾರ್ಮಿಕರ ಅವಲಂಬಿತರು ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಪ್ರಕರಣಗಳಲ್ಲಿ ಪರಿಹಾರ ನೀಡುಬಹುದಾಗಿರುತ್ತದೆ ಎಂದು ಸಭೆಗೆಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** : ಇದುವರೆಗೂ 13 ನೋಂದಾಯಿತರಲ್ಲದ ಮೃತ ಕಾರ್ಮಿಕರ ಅವಲಂಬಿತರಿಗೆ ರೂ. 29,00,000/- ಗಳನ್ನು ಬಿಡುಗಡೆ ಮಾಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (IV)**

**ಹೊರಗುತ್ತಿಗೆ ಆಧಾರದ ಮೇಲೆ ಮಂಡಳಿಯಲ್ಲಿ ನೇಮಕಗೊಳ್ಳುವ ಅಧಿಕಾರಿ / ಸಿಬ್ಬಂದಿಯ ಪದನಾಮ ಬದಲಾವಣೆ / ವೇತನ ಹೆಚ್ಚಳ / ಹೆಚ್ಚುವರಿ ಹುದ್ದೆಗಳ ಸೃಜನೆ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.**

ಮಂಡಳಿಯ ಕೇಂದ್ರ ಕಛೇರಿ ಮತ್ತು ಕ್ಷೇತ್ರ ಕಛೇರಿಗಳಲ್ಲಿ ಮಂಡಳಿಯ ಕೆಲಸಗಳನ್ನು ನಿರ್ವಹಿಸಲು ಹೊರಗುತ್ತಿಗೆ ಸಿಬ್ಬಂದಿಗಳ ವೇತನ ನಿಗದಿ, ವಿದ್ಯಾರ್ಹತೆ ಮತ್ತು ಹೆಚ್ಚುವರಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಪಡೆಯುವ ಬಗ್ಗೆ ಅನುಮೋದನೆ ಕೋರಿ ಸರ್ಕಾರಕ್ಕೆ ಕಡತವನ್ನು ಮಂಡಿಸಲಾಗಿತ್ತು. ಸರ್ಕಾರದ ಪತ್ರ ಸಂಖ್ಯೆ : ಕಾಇ 189 ಎಲ್‌ಇಟಿ 2017 ದಿನಾಂಕ : 29.08.2019ರಲ್ಲಿ ಮಂಡಳಿಯ ಹೊರಗುತ್ತಿಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ, ಹೊರಗುತ್ತಿಗೆ ಸಿಬ್ಬಂದಿಗಳ ವಿದ್ಯಾರ್ಹತೆ ಮತ್ತು ವೇತನ ನಿಗದಿಪಡಿಸಿಕೊಳ್ಳುವ ಅವಕಾಶವು ಮಂಡಳಿಗೆ ಇರುತ್ತದೆ ಎಂದು ತಿಳಿಸಿರುತ್ತದೆ.

ಮಂಡಳಿಯ ಕೇಂದ್ರ ಕಛೇರಿಯಲ್ಲಿ ಮತ್ತು ಕ್ಷೇತ್ರ ಮಟ್ಟದ ಕಛೇರಿಗಳಲ್ಲಿ ಹೊರಗುತ್ತಿಗೆ ಸಿಬ್ಬಂದಿಗಳ ಕೆಲಸದ ಸ್ವರೂಪದಲ್ಲಿ ವಿಭಿನ್ನವಾಗಿದ್ದು, ಮಂಡಳಿಯ ಕೇಂದ್ರ ಕಛೇರಿಯ ಹೊರಗುತ್ತಿಗೆ ಸಿಬ್ಬಂದಿಯವರ ಪದನಾಮವನ್ನು ಅವರು ನಿರ್ವಹಿಸುವ ಕೆಲಸದ ಸ್ವರೂಪಕ್ಕೆ ಅನುಗುಣವಾಗಿ ಬದಲಾಯಿಸಲಾಗಿರುತ್ತದೆ. ಹಾಗೆಯೇ ಅವರ ವಿದ್ಯಾರ್ಹತೆಗೆ

ಅನುಗುಣವಾಗಿ ಪದನಾಮವನ್ನು ಬದಲಾಯಿಸಲಾಗಿರುತ್ತದೆ. ಹುದ್ದೆಗೆ ಅನುಗುಣವಾಗಿ ವೇತನವನ್ನು ಸಹ ಪರಿಷ್ಕರಿಸಲಾಗಿರುತ್ತದೆ. ಅದೇ ರೀತಿಯಲ್ಲಿ ಹೆಚ್ಚು ಕೆಲಸದ ಒತ್ತಡವಿರುವ ಕಛೇರಿಗಳಿಗೆ ಹೆಚ್ಚುವರಿ ಸಿಬ್ಬಂದಿಗಳನ್ನು ಸಹ ನಿಯೋಜಿಸಲಾಗಿರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಹೊರಗುತ್ತಿಗೆ ಆಧಾರದ ಮೇಲೆ ಮಂಡಳಿಯಲ್ಲಿ ನೇಮಕಗೊಳ್ಳುವ ಅಧಿಕಾರಿ / ಸಿಬ್ಬಂದಿಯ ಪದನಾಮ ಬದಲಾವಣೆ / ವೇತನ ಹೆಚ್ಚಳ / ಹೆಚ್ಚುವರಿ ಹುದ್ದೆಗಳ ಸೃಜನೆ ಮಾಡಿರುವುದಕ್ಕೆ ಹಾಗೂ ಹುದ್ದೆಗೆ ಅನುಗುಣವಾಗಿ ವೇತನ ಪರಿಷ್ಕರಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (V)**

**ಮಂಡಳಿಯ ಅಧ್ಯಕ್ಷರ ಉಪಯೋಗಕ್ಕಾಗಿ ಇನೋವಾ ಕ್ರಿಸ್ಟಾ ವಾಹನವನ್ನು ಖರೀದಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.**

ದಿನಾಂಕ : 12.02.2020 ರಂದು ಮಾನ್ಯ ಕಾರ್ಮಿಕರ ಸಚಿವರ ಕಛೇರಿಯಿಂದ ಮಂಡಳಿಯ ಅಧ್ಯಕ್ಷರ ಉಪಯೋಗಕ್ಕಾಗಿ ಒಂದು ಹೊಸ ಇನೋವಾ ಕ್ರಿಸ್ಟಾ ವಾಹನವನ್ನು ಒದಗಿಸುವಂತೆ ಸೂಚಿಸಿರುತ್ತಾರೆ. ಅದರಂತೆ ದಿನಾಂಕ : 18.02.2020 ರಂದು ಮೆ: ನಂದಿ ಟಯೋಟಾ ಮೋಟಾರ್ ವರ್ಲ್ಡ್ ಪ್ರೈ.ಲಿ., ಬೆಂಗಳೂರು ಇವರಿಂದ ಹೊಸದಾಗಿ ವಾಹನವನ್ನು ಖರೀದಿಸಿ ಮಾನ್ಯ ಅಧ್ಯಕ್ಷರಿಗೆ ಒದಗಿಸಲಾಗಿರುತ್ತದೆ. ಸದರಿ ವಾಹನ ಖರೀದಿಯ ಒಟ್ಟು ಮೊತ್ತ ರೂ. 29,29,477/- ಗಳಾತರುತ್ತದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಮಂಡಳಿ ಅಧ್ಯಕ್ಷರ ಉಪಯೋಗಕ್ಕಾಗಿ ಹೊಸ ಇನ್ನೋವಾ ಕ್ರಿಸ್ಟಾ ವಾಹನವನ್ನು ಖರೀದಿಸಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (VI)**

**ಮಂಡಳಿಯಲ್ಲಿ ಕಾರ್ಯನಿರ್ವಹಿಸುವ ಸಹಾಯಕ ಕಾರ್ಮಿಕ ಆಯುಕ್ತರು ಮತ್ತು ಕಾರ್ಮಿಕ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.**

ಮಂಡಳಿಯ ಕೇಂದ್ರ ಕಛೇರಿಯಲ್ಲಿ ಕಾರ್ಮಿಕ ಇಲಾಖೆಯಿಂದ ನಿಯೋಜನೆ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಉಪಕಾರ್ಯದರ್ಶಿ–01, ಸಹಾಯಕ ಕಾರ್ಯದರ್ಶಿಯವರು – 02, ಹಾಗೂ ಕಾರ್ಮಿಕ ಅಧಿಕಾರಿಗಳು – 03 ಮತ್ತು ಕಾನೂನು ತಜ್ಞರು –01 ಹಾಗೂ ತಾಂತ್ರಿಕ ಸಲಹೆಗಾರರು – 01 ಸೇರಿದಂತೆ ಒಟ್ಟು 10 ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಬಾಡಿಗೆ ವಾಹನಗಳನ್ನು ಒದಗಿಸಲಾಗಿರುತ್ತದೆ. ಇವರುಗಳಲ್ಲಿ ಒಟ್ಟು 06 ಅಧಿಕಾರಿಗಳಿಗೆ ವಾಹನವನ್ನು ಒದಗಿಸಿರುವ ಬಗ್ಗೆ

ದಿನಾಂಕ: 20.03.2018 ರಂದು ನಡೆದ ಮಂಡಳಿಯ 25ನೇ ಸಭೆಯಲ್ಲಿ ಅನುಮತಿ ಪಡೆಯಲಾಗಿರುತ್ತದೆ. ಇನ್ನುಳಿದ ಸಹಾಯಕ ಕಾರ್ಯದರ್ಶಿಯವರು ಹಾಗೂ ಕಾರ್ಮಿಕ ಅಧಿಕಾರಿಯವರು ಮಂಡಳಿಗೆ ಇತ್ತೀಚೆಗೆ ನಿಯೋಜನೆ ಮೇರೆಗೆ ಬಂದಿರುತ್ತಾರೆ. ಹಾಗಾಗೀ ಅವರುಗಳಿಗೆ 04 ಹೊರಗುತ್ತಿಗೆ ವಾಹನಗಳನ್ನು ಒದಗಿಸಲಾಗಿರುತ್ತದೆ ಎಂದುಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** : ಮಂಡಳಿಯ ಅಧಿಕಾರಿಗಳ ಉಪಯೋಗಕ್ಕಾಗಿ ಹೊರಗುತ್ತಿಗೆ ವಾಹನಗಳನ್ನು ಪಡೆದಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

**ಕಾರ್ಯಸೂಚಿ – 22 (VII)**

**ಎಲೆಕ್ಟ್ರಿಕಲ್ ಮತ್ತು ಪ್ಲಂಬಿಂಗ್ ಟೂಲ್‌ಕಿಟ್ ಸರಬರಾಜು ಮಾಡಲು ಟೆಂಡರ್ ಕರೆದಿರುವ ಬಗ್ಗೆ ಘಟನೋತ್ತರ ಅನುಮೋದನೆ ಪಡೆಯುವ ಕುರಿತು.**

ಶ್ರಮ ಸಾಮರ್ಥ್ಯ ಟ್ರೈನಿಂಗ್ ಕಮ್ ಟೂಲ್‌ಕಿಟ್ ತರಬೇತಿ ಕಾರ್ಯಕ್ರಮದ ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್ ತರಬೇತಿಗೆ ಬಹಳಷ್ಟು ಕಾರ್ಮಿಕರು ಆಸಕ್ತಿ ತೋರುತ್ತಿದ್ದು, ಅದಕ್ಕಾಗಿ 2019–20 ರಲ್ಲಿ 1000 ಎಲೆಕ್ಟ್ರಿಕಲ್, 1000 ಪ್ಲಂಬಿಂಗ್ ಕಿಟ್ ಸರಬರಾಜುಗಾಗಿ ಟೆಂಡರ್ ಕರೆದು, ಮೂರನೇ ವ್ಯಕ್ತಿ ಪರಿವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ಈ ಟೂಲ್‌ಕಿಟ್‌ನಲ್ಲಿ ಹೆಚ್ಚು ಸಾಮರ್ಥ್ಯವುಳ್ಳ ಅಂದರೆ 600w (Impact and Rotary) Drilling Machineಗೆ ಮೆ: ಶ್ರೀ ವಿಘ್ನೇಶ್ವರ ಎಂಟರ್‌ಪ್ರೈಸಸ್ ಬೆಂಗಳೂರು ಸಂಸ್ಥೆರವರು ಟೆಂಡರ್‌ನಲ್ಲಿ LI ಆಗಿ ಆಯ್ಕೆಯಾಗಿದ್ದು ಅವರುಗಳಿಗೆ ದಿನಾಂಕ:26.12.2019 ರಂದು ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.ಸದರಿ ಟೆಂಡರ್‌ಗಳ ಮೊತ್ತ ಕೆಳಕಂಡಂತಿದೆ.

ಪ್ಲಂಬಿಂಗ್ (1000 ಕಿಟ್) ಕಿಟ್ ಟೆಂಡರ್ ಮೊತ್ತ – ರೂ. 59,50,000/–

ಎಲೆಕ್ಟ್ರಿಕಲ್ (1000 ಕಿಟ್) ಕಿಟ್ ಟೆಂಡರ್ ಮೊತ್ತ – ರೂ. 66,63,000/–

ಮುಂದುವರೆದು, ದಿನಾಂಕ:05.02.2020 ರಂದು ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್ ಟೂಲ್‌ಕಿಟ್‌ನ ಮೂರನೇ ವ್ಯಕ್ತಿ ತಪಾಸಣೆಯನ್ನು ಪ್ರಾಚಾರ್ಯರು, ಐ.ಟಿ.ಐ ಕಾಲೇಜ್. ಡೈರಿ ವೃತ್ತ, ಇವರಿಂದ ಮಾಡಿಸಲಾಗಿದೆ ಮತ್ತು ಅದರಂತೆ ಈಗಾಗಲೇ ಕಿಟ್‌ಗಳನ್ನು ಸಂಬಂಧಪಟ್ಟ ನಿರ್ಮಿತಿ ಕೇಂದ್ರಗಳಿಗೆ ಸರಬರಾಜು ಮಾಡಲಾಗುತ್ತಿದೆ ಎಂದು ಸಭೆಗೆ ಮಂಡಳಿಯ ಕಾರ್ಯದರ್ಶಿರವರು ತಿಳಿಸಿದರು.

**ಮಂಡಳಿಯ ನಿರ್ಣಯ** :ಶ್ರಮ ಸಾಮರ್ಥ್ಯ ಟ್ರೈನಿಂಗ್ ಕಮ್ ಟೂಲ್‌ಕಿಟ್ ತರಬೇತಿ ಕಾರ್ಯಕ್ರಮದ ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್ ತರಬೇತಿ ನೀಡಲು ಮೆ||ಶ್ರೀವಿಘ್ನೇಶ್ವರ ಎಂಟರ್‌ಪ್ರೈಸಸ್ ಬೆಂಗಳೂರು ಸಂಸ್ಥೆ ಇವರಿಗೆ ದಿನಾಂಕ : 26.12.2019 ರಂದು

ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಂಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ಇತರೆ ವಿಷಯಗಳು**

**1) ಮಂಡಳಿಯ ಗೃಹ ಸೌಲಭ್ಯಕ್ಕಾಗಿ ಕಳೆದ ಸಾಲುಗಳ ಸುಂಕ ಸಂಗ್ರಹಣೆಯ ಶೇ.10ರಷ್ಟು ಮೊತ್ತವನ್ನು ಮೀಸಲಿಟ್ಟಿರುವ ಕುರಿತು**

ಕಾರ್ಮಿಕ ಮತ್ತು ಉದ್ಯೋಗ ಮಂತ್ರಾಲಯ ಕೇಂದ್ರ ಸರ್ಕಾರ ಇವರು ನೀಡಿರುವ ನಿರ್ದೇಶನದಂತೆ ಮತ್ತು ಕಾರ್ಮಿಕರ ಅವಶ್ಯಕತೆಗೆ ಅನುಗುಣವಾಗಿ ಮಂಡಳಿಯ ಫಲಾನುಭವಿಗಳಿಗೆ ಗೃಹ ಸೌಲಭ್ಯ ಒದಗಿಸಲು ಕಳೆದ ಸಾಲುಗಳ ಹಾಗೂ ಪ್ರಸಕ್ತ ಸಾಲಿನ ಸುಂಕ ಸಂಗ್ರಹಣೆಯ ಗರಿಷ್ಟ ಶೇ. 10ರಷ್ಟು ಮೊತ್ತವನ್ನು ವಿನಿಯೋಗಿಸಲು ಮಂಡಳಿಯ ಅನುಮೋದನೆಗೆ ಮಂಡಿಸಲಾಯಿತು.

**ಮಂಡಳಿಯ ನಿರ್ಣಯ** : ಕಾರ್ಮಿಕರ ಅವಶ್ಯಕತೆಗೆ ಅನುಗುಣವಾಗಿ ಮಂಡಳಿಯ ಫಲಾನುಭವಿಗಳಿಗೆ ಗೃಹ ಸೌಲಭ್ಯ ಒದಗಿಸಲು ಕಳೆದ ಸಾಲುಗಳ ಹಾಗೂ ಪ್ರಸಕ್ತ ಸಾಲಿನ ಸುಂಕ ಸಂಗ್ರಹಣೆಯ ಗರಿಷ್ಟ ಶೇ. 10ರಷ್ಟು ಮೊತ್ತವನ್ನು ವಿನಿಯೋಗಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**2) ಮಂಡಳಿಯ ಕಾರ್ಯದರ್ಶಿಯವರ ವಿತ್ತಾಧಿಕಾರವನ್ನು ಹೆಚ್ಚಿಸುವ ಕುರಿತು.**

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಪ್ರಸ್ತುತ ಆಡಳಿತಾತ್ಮಕ ಮತ್ತು ಹಣಕಾಸಿನ ಕೆಲಸ ಕಾರ್ಯಗಳು ಹೆಚ್ಚಾಗಿರುವುದರಿಂದ ಸುಗಮ ಮತ್ತು ಸುಲಲಿತ ಆಡಳಿತದ ಹಿತದೃಷ್ಟಿಯಿಂದ ಮಂಡಳಿಯ ಕಾರ್ಯದರ್ಶಿಯವರಿಗೆ ಹಣಕಾಸಿನ ವಿತ್ತಾಧಿಕಾರವನ್ನು ಹೆಚ್ಚಿಗೆ ಮಾಡುವ ಅವಶ್ಯಕವೆಂದು ಕಂಡುಬಂದ ಹಿನ್ನಲೆಯಲ್ಲಿ ಈಗಾಗಲೇ ಮಂಡಳಿಯ ಕಾರ್ಯದರ್ಶಿಗಳಿಗೆ ಇಲಾಖಾ ಮುಖ್ಯಸ್ಥರುಗಳಿಗೆ ಸರ್ಕಾರ ನೀಡಿರುವಂತಹ ವಿತ್ತಾಧಿಕಾರವನ್ನು ನೀಡಲಾಗಿದ್ದು, ಮಂಡಳಿಯ 28ನೇ ಸಭೆಯಲ್ಲಿ ಅದೇ ವಿತ್ತಾಧಿಕಾರವನ್ನು ಮುಂದುವರೆಸುವಂತೆ ಸೂಚಿಸುತ್ತಾ ರೂ.2.5ಕೋಟಿ ಮೀರಿದಲ್ಲಿ ಮಂಡಳಿಯಲ್ಲಿ ನಿರ್ಣಯಿಸಿ ನಂತರ ಸರ್ಕಾರದ ಕಾರ್ಯದರ್ಶಿಗಳ ಅನುಮೋದನೆಗೆ ಸಲ್ಲಿಸಬಹುದೆಂದು ತಿಳಿಸಿದರು.ಇದಕ್ಕೆ ಮಂಡಳಿಯ ಅಧ್ಯಕ್ಷರು ಮತ್ತು ಸರ್ವ ಸದಸ್ಯರುಗಳು ಸಹಮತ ವ್ಯಕ್ತಪಡಿಸಿದರು.

**ಮಂಡಳಿಯ ನಿರ್ಣಯ** :ಈಗಾಗಲೇ ಮಂಡಳಿಯ ಕಾರ್ಯದರ್ಶಿಗಳಿಗೆ ಇಲಾಖಾ ಮುಖ್ಯಸ್ಥರುಗಳಿಗೆ ಸರ್ಕಾರ ನೀಡಿರುವಂತಹ ವಿತ್ತಾಧಿಕಾರವನ್ನು ಮುಂದುವರೆಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**3) ಶೈಕ್ಷಣಿಕ ಸಹಾಯ ಧನದ ಅರ್ಜಿ ಸಲ್ಲಿಕೆಯ ಅವಧಿಯನ್ನು ವಿಸ್ತರಿಸುವ ಕುರಿತು.**

2019-20 ನೇ ಸಾಲಿನಲ್ಲಿ **ಶೈಕ್ಷಣಿಕ ಸಹಾಯ ಧನದ ಅರ್ಜಿಗಳನ್ನು ಸಲ್ಲಿಸಲು ಮಾರ್ಚ್** 2020 ರ ಅಂತ್ಯಕ್ಕೆ ಮುಕ್ತಾಯವಾಗುತ್ತಿದ್ದು, ಈ ಅವಧಿಯನ್ನು ವಿಸ್ತರಿಸುವಂತೆ ಹಲವಾರು ಕಾರ್ಮಿಕ ಸಂಘಟನೆಗಳು ಮನವಿ ಸಲ್ಲಿಸುತ್ತಿರುವುದಾಗಿ ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, 2019-20 ನೇ ಸಾಲಿನ **ಶೈಕ್ಷಣಿಕ ಸಹಾಯ ಧನದ ಅರ್ಜಿಗಳನ್ನು ಜೂನ್-30 ರವರೆಗೆ ವಿಸ್ತರಿಸಲು** ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**4) ಪ್ರಸ್ತುತ ನೀಡುತ್ತಿರುವ ಶೈಕ್ಷಣಿಕ ಸಹಾಯ ಧನದ ಮೊತ್ತವನ್ನು ಹೆಚ್ಚಿಸುವ ಕುರಿತು.**

ಪ್ರಸಕ್ತ ಸಾಲಿನಲ್ಲಿ ನೀಡುತ್ತಿರುವ ಶೈಕ್ಷಣಿಕ ಸಹಾಯ ಧನದ ಮೊತ್ತವನ್ನು ಹೆಚ್ಚಿಸುವಂತೆ ಹಲವಾರು ಕಾರ್ಮಿಕ ಸಂಘಟನೆಗಳು ಮನವಿ ಸಲ್ಲಿಸುತ್ತಿರುವುದಾಗಿ ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

**ಮಂಡಳಿಯ ನಿರ್ಣಯ :**ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ನಂತರ, ಶೈಕ್ಷಣಿಕ ಸಹಾಯ ಧನದ ಮೊತ್ತವನ್ನು ಶೇಕಡ 25 ರಷ್ಟು ಹೆಚ್ಚಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**5)ಕೋರೋನಾ ವೈರಸ್ ಹರಡುತ್ತಿರುವ ಹಿನ್ನಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ 10 ಲಕ್ಷ ಗಳನ್ನು ಬಿಡುಗಡೆ ಮಾಡಿರುವ ಕುರಿತು.**

ರಾಜ್ಯಾದ್ಯಂತ ಕೋರೋನಾ ವೈರಸ್ ಹರಡುತ್ತಿರುವ ಹಿನ್ನಲೆಯಲ್ಲಿ ಕಟ್ಟಡ ಕಾರ್ಮಿಕರನ್ನು ಕೋರೋನಾ ವೈರಸ್ ಸೋಂಕಿನಿಂದ ತಡೆಯುವುದಕ್ಕೆ ಅರಿವು ಮೂಡಿಸಲು ಮತ್ತು ವ್ಯಾಪಕ ಪ್ರಚಾರ ವನ್ನು ನೀಡಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸರ್ಕಾರವು ಮಂಡಳಿಗೆ ಸೂಚಿಸಿರುತ್ತದೆ. ಈ ಹಿನ್ನಲೆಯಲ್ಲಿ ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ 10 ಲಕ್ಷಗಳನ್ನು ಮಂಡಳಿಯಿಂದ ಬಿಡುಗಡೆ ಮಾಡಲಾಗಿರುತ್ತದೆ ಎಂದು ಮಂಡಳಿಯ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು.

ಮಂಡಳಿಯ ನಿರ್ಣಯ: ಕೋರೋನಾ ವೈರಸ್ ಹರಡುತ್ತಿರುವ ಹಿನ್ನಲೆಯಲ್ಲಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ ತಲಾ 10 ಲಕ್ಷ ಗಳನ್ನು ಬಿಡುಗಡೆ ಮಾಡಿರುವುದಕ್ಕೆ ಸಭೆಯು ಸರ್ವಾನುಮತದಿಂದ ಘಟನೋತ್ತರ ಅನುಮೋದನೆ ನೀಡಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**(ಅರಬೈಲ್ ಶಿವರಾಮ್ ಹೆಬ್ಬಾರ)**
**ಸನ್ಮಾನ್ಯ ಕಾರ್ಮಿಕ ಸಚಿವರು ಹಾಗೂ ಅಧ್ಯಕ್ಷರು,**
**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ**
**ಕಾರ್ಮಿಕರ ಕಲ್ಯಾಣ ಮಂಡಳಿ, ಬೆಂಗಳೂರು**